# ಹಂಪಿ ಟೈಮ್ಸ್

HAMPI TIMES
KANNADA DAILY
ಕನ್ನಡ ದಿನಪತ್ರಿಕೆ

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 256 Issue: 256 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 17.04.2025 • ಗುರುವಾರ Thursday • ಪುಟ:04 Page:04 • ಬೆಲೆ:2 Rs:2



Good Opportunity for Branding
1,25,000+
Digital E-PAPER READERS



No.1 HAMPI TIMES LEADING PRINT & DIGITAL District News Paper
Call Us for Advertisements: 9448633038





## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

## ಸಿಇಟಿ ಪರೀಕ್ಷೆ: 144 ವಿದ್ಯಾರ್ಥಿಗಳು ಗೈರು

**ಹಂಪಿ ಟೈಮ್ಸ್ ಹೊಸಪೇಟೆ**

ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಬುಧವಾರ ಎರಡು ವಿಷಯಗಳಿಗೆ ನಡೆಸಿದ ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಸಿಇಟಿ) ಸುಗಮವಾಗಿ ಜರುಗಿದ್ದು, ಜಿಲ್ಲೆಯಲ್ಲಿ, 3901 ವಿದ್ಯಾರ್ಥಿಗಳು ಹಾಜರಾಗಿ, 144 ವಿದ್ಯಾರ್ಥಿಗಳು ಗೈರಾಗಿದ್ದಾರೆ.

ವಿಜಯನಗರದಲ್ಲಿ ನಗರದ 10 ಪರೀಕ್ಷಾ ಕೇಂದ್ರಗಳಲ್ಲಿ ಸಿಇಟಿ ಪರೀಕ್ಷೆ ಯಾವುದೇ ಗೊಂದಲವಿಲ್ಲದೆ ಸುಗಮವಾಗಿ ನಡೆಯಿತು ಎಂದು ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಉಪನಿರ್ದೇಶಕರು ತಿಳಿಸಿದ್ದಾರೆ.

# ಜನರಿಗೆ ಕಂಡ ಅಭಿವೃದ್ಧಿ ಬಿಜೆಪಿಗೆ ಕಾಣುತ್ತಿಲ್ಲ

## ಬಿಜೆಪಿಯವರು ಕಲ್ಬುರ್ಗಿಗೆ ಬಂದು ಕಣ್ಣು ತೆರೆದು ನೋಡಿದರೆ ಅಭಿವೃದ್ಧಿಯ ಮಹಾಪೂರ ಕಾಣಿಸುತ್ತದೆ : ಸಿಎಂ

**ಹಂಪಿ ಟೈಮ್ಸ್ ಕಲ್ಬುರ್ಗಿ**

ಪ್ರಣಾಳಿಕೆಯಲ್ಲಿ, ಬಜೆಟ್ ನಲ್ಲಿ ಘೋಷಿಸಿದ ಕಾರ್ಯಕ್ರಮಗಳೆಲ್ಲಾ ಜಾರಿ ಆಗುತ್ತಿರುವುದು ಜನರ ಕಣ್ಣಿಗೆ ಕಾಣುತ್ತಿದೆ, ಬಿಜೆಪಿ ಕಣ್ಣಿಗೆ ಮಾತ್ರ ಕಾಣುತ್ತಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕಲ್ಬುರ್ಗಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ, ಗುಲ್ಬರ್ಗಾ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಆವರಣದಲ್ಲಿ 216.53 ಕೋಟಿ ವೆಚ್ಚದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ 6.20 ಕೋಟಿ ವೆಚ್ಚದ ಬ್ರಾಕಿಥೆರಪಿ ವಿಕೀರಣ ಚಿಕಿತ್ಸೆ ಘಟಕವನ್ನು ಉದ್ಘಾಟಿಸಿ ಹಾಗೂ 12 ಬೃಹತ್ ಮೊತ್ತದ ವಿವಿಧ ಕಾಮಗಾರಿಗಳಿಗೆ ಅಡಿಗಲ್ಲು ಹಾಕಿ ಮಾತನಾಡಿದರು. ಪ್ರತೀ ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜು, ಟ್ರಾಮಾ ಸೆಂಟರ್, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಕ್ಯಾನ್ಸರ್ ಆಸ್ಪತ್ರೆ ಇರಲೇಬೇಕು ಎನ್ನುವುದು ನಮ್ಮ ಸರ್ಕಾರದ ಗುರಿ. ಬಡವರಿಗೂ ಉತ್ತಮ ಗುಣಮಟ್ಟದ ಆರೋಗ್ಯ ಸೇವೆ ಸಿಗಬೇಕು ಎನ್ನುವ ಉದ್ದೇಶದಿಂದ ಈ ಘೋಷಣೆ ಮಾಡಿದ್ದು ಒಂದೊಂದೇ ಜಿಲ್ಲೆಯಲ್ಲಿ ಇವೆಲ್ಲವೂ ನೆರವೇರುತ್ತಿವೆ.ಅಭಿವೃದ್ಧಿಗೆ ಸರ್ಕಾರದ ಬಳಿ ಹಣ ಇಲ್ಲ ಎನ್ನುವ ಬಿಜೆಪಿಯವರು ಕಲ್ಬುರ್ಗಿಗೆ



ಬಂದು ಕಣ್ಣು ತೆರೆದು ನೋಡಿದರೆ ಅಭಿವೃದ್ಧಿಯ ಮಹಾಪೂರ ಕಾಣಿಸುತ್ತದೆ. ಮಲ್ಲಿಕಾರ್ಜುನ ಖರ್ಗೆ ಅವರು, ಪ್ರಿಯಾಂಕ್ ಖರ್ಗೆ ಅವರು ಮತ್ತು ಶರಣ ಪ್ರಕಾಶ್ ಪಾಟೀಲ್ ಅವರು ಯಾವ ಮಟ್ಟದ ಅಭಿವೃದ್ಧಿ ಮಾಡುತ್ತಿದ್ದಾರೆ ಎನ್ನುವುದನ್ನು ಗುಲ್ಬರ್ಗಕ್ಕೆ ಬಂದು ನೋಡಲಿ. ಸರ್ಕಾರದ ಘೋಷಿಸಿದ್ದ, ಬಜೆಟ್‌ನಲ್ಲಿ ತಿಳಿಸಿದ್ದ ಎಲ್ಲವೂ ಈ ಜಿಲ್ಲೆಯಲ್ಲಿ ಜಾರಿ ಆಗುತ್ತಿದೆ. ಅಭಿವೃದ್ಧಿಗೆ ನಮ್ಮ ಸರ್ಕಾರದಲ್ಲಿ ಹಣಕ್ಕೆ ಕೊರತೆ ಇಲ್ಲ. ಎಲ್ಲಾ ವರ್ಗದ ಜನರಿಗೆ, ಅವಕಾಶಗಳಿಂದ ವಂಚಿತರಾದ ಜನರಿಗೆ ಸರ್ಕಾರದ ಯೋಜನೆಗಳನಗನ್ನು ತಲುಪಿಸಲು ನಮ್ಮ ಸರ್ಕಾರ ನಿರಂತರವಾಗಿ ಶ್ರಮಿಸುತ್ತಿದೆ ಎಂದರು.

**ಯುವನಿಧಿ ಜೊತೆಗೆ ಉದ್ಯೋಗ ಸೃಷ್ಟಿ:**

ವರ್ಷಕ್ಕೆ 2 ಕೋಟಿ ಉದ್ಯೋಗ ಕೊಡ್ತೀನಿ ಅಂದಿದ್ದ ಪ್ರಧಾನಿ ಮೋದಿ 10 ವರ್ಷದಲ್ಲಿ 20 ಕೋಟಿ ಉದ್ಯೋಗ ಕೊಡಬೇಕಿತ್ತು. ಆದರೆ 20 ಲಕ್ಷ ಉದ್ಯೋಗವನ್ನೂ ಕೊಡದೆ ಪರಮ ಸುಳ್ಳು ಹೇಳಿ ಯುವ ಜನರನ್ನು ವಂಚಿಸಿದರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಸಮಾಧನ ವ್ಯಕ್ತಪಡಿಸಿದರು.

ಕಲ್ಯಾಣ ಕರ್ನಾಟಕದ ಜಿಲ್ಲೆಗಳ ಯುವಕ ಯುವತಿಯರಿಗೆ ಆಯೋಜಿಸಿದ್ದ ಉದ್ಯೋಗ ಮೇಳವನ್ನು ಉದ್ಘಾಟಿಸಿ ಯುವ ಪದವೀಧರರಿಗೆ ನೇಮಕಾತಿ ಪತ್ರವನ್ನು ವಿತರಿಸಿ ಮಾತನಾಡಿದರು. ನಾವು ನುಡಿದಂತೆ ನಡೆಯುತ್ತಾ ಐದೂ ಗ್ಯಾರಂಟಿಗಳನ್ನು ಜಾರಿ ಮಾಡಿದೆವು. ಇದರಲ್ಲಿ ಯುವ ನಿಧಿ ಕಾರ್ಯಕ್ರಮ ಕೂಡ ಸೇರಿದೆ. ಭತ್ಯೆ ಜೊತೆಗೆ ಕೌಶಲ್ಯ ತರಬೇತಿ ನೀಡಿ ಉದ್ಯೋಗವನ್ನೂ ಒದಗಿಸುತ್ತಿದ್ದೇವೆ. ನುಡಿದಂತೆ ನಡೆಯುತ್ತಾ ಐದೂ ಗ್ಯಾರಂಟಿಗಳನ್ನು ಜಾರಿ ಮಾಡಿದೆವು. ಭತ್ಯೆ ಜೊತೆಗೆ ಕೌಶಲ್ಯ ತರಬೇತಿ ನೀಡಿ ಉದ್ಯೋಗವನ್ನೂ ಒದಗಿಸುತ್ತಿದ್ದೇವೆ. ಮಾರುಕಟ್ಟೆ ಆಧಾರಿತ ಕೌಶಲ್ಯ ನೀಡಿ ಉದ್ಯೋಗ ಸೃಜಿಸಲು ಸಚಿವ ಶರಣ ಪ್ರಕಾಶ್ ಅವರಿಗೆ ಸೂಚಿಸಿದ್ದೇನೆ. ಹೀಗಾಗಿ ನೋಂದಾಯಿತರಾದ ಎಲ್ಲರಿಗೂ ಉದ್ಯೋಗ ಸಿಕ್ಕೇ ಸಿಗುತ್ತದೆ ಎಂದು ಭರವಸೆ ನೀಡಿದರು. ಜಯ್ ಸಿಂಗ್ KKRDB ಅಧ್ಯಕ್ಷರಾದ ಬಳಿಕ 5000 ಕೋಟಿಗೂ ಅಧಿಕ ಮೊತ್ತದ ಅಭಿವೃದ್ಧಿ ಕಾರ್ಯಗಳನ್ನು ಕಲ್ಯಾಣ ಕರ್ನಾಟಕದಲ್ಲಿ ನಿರ್ವಹಿಸುತ್ತಿದ್ದಾರೆ ಎಂದು ಮೆಚ್ಚುಗೆ ಸೂಚಿಸಿದರು.

# ನಾ ಸತ್ತಿಲ್ಲ ನಾಟಕ ಪ್ರದರ್ಶನ ಪ್ರವೇಶ ಉಚಿತ

## ಹೊಸಪೇಟೆ ಟಿಬಿಡ್ಯಾಂನ ಕನ್ನಡ ಕಲಾ ಸಂಘದಿಂದ ಬೆಂಗಳೂರಿನಲ್ಲಿ ಏ.19 ಮತ್ತು ಏ.20 ರಂದು ಪ್ರದರ್ಶನ

## ಕನ್ನಡ ಕಲಾ ಸಂಘದ ಕಾರ್ಯದರ್ಶಿ ಚಂದ್ರಶೇಖರ ಎಸ್.ಎಸ್ ಹೇಳಿಕೆ | ಸಂಘಕ್ಕೆ 60 ವರ್ಷಗಳ ಸಂಭ್ರಮ

**ಹಂಪಿ ಟೈಮ್ಸ್ ಹೊಸಪೇಟೆ**



ಕರ್ನಾಟಕ ನಾಟಕ ಅಕಾಡಮಿ ಪ್ರಶಸ್ತಿ ಪುರಸ್ಕೃತ ನಗರದ ಟಿ.ಬಿ.ಡ್ಯಾಂ ಕನ್ನಡ ಕಲಾ ಸಂಘದಿಂದ ಏ.19 ಮತ್ತು 20 ರಂದು ಎರಡು ದಿನ ಬೆಂಗಳೂರಿನಲ್ಲಿ ನಾ ಸತ್ತಿಲ್ಲ ನಾಟಕ ಪ್ರದರ್ಶಗೊಳ್ಳುತ್ತಿದೆ. ಪ್ರೇಕ್ಷಕರಿಗೆ ಪ್ರವೇಶ ಉಚಿತವಾಗಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಕಲಾರಾಧಕರು, ಕಲಾಪೋಷಕರು, ಕಲಾಭಿಮಾನಿಗಳು ಆಗಮಿಸಿ ಪ್ರದರ್ಶನಗಳನ್ನು ವೀಕ್ಷಿಸಬೇಕೆಂದು ಸಂಘದ ಕಾರ್ಯದರ್ಶಿ ಎಸ್.ಎಸ್.ಚಂದ್ರಶೇಖರ ತಿಳಿಸಿದ್ದಾರೆ.

ವಿಜಯಪುರದ ಡಾ.ಕೃಷ್ಣ ಕೋಲ್ಹಾರ ಕುಲಕರ್ಣಿ ಅವರ ರಚನೆಯ "ನಾ ಸತ್ತಿಲ್ಲ" ಎಂಬ ಕನ್ನಡ ಕುತೂಹಲಕಾರಿ ನಾಟಕವು ಶ್ರೀಕೃಷ್ಣ ಕುಲಕರ್ಣಿ ಸಾರವಾಡ ಇವರ ನಿರ್ದೇಶನದಲ್ಲಿ ರಾಜ್ಯದ ಹಲವಡೆ ಯಶಸ್ವಿ ಪ್ರದರ್ಶನಗಳನ್ನು ಕಂಡು ಸಾಣೆಹಳ್ಳಿಯ ಶ್ರೀಗಳ ಕೃಪಾಶೀರ್ವಾದ ಮತ್ತು ಪ್ರೇಕ್ಷಕರ ಪ್ರಶಂಸೆಗಳಿಗೆ ಪಾತ್ರವಾಗಿರುತ್ತದೆ. ಕರ್ನಾಟಕ ನಾಟಕ ಅಕಾಡೆಮಿ ವತಿಯಿಂದ ತಿಂಗಳ ನಾಟಕ ಸಂಭ್ರಮದ ಅಂಗವಾಗಿ ಏ.19 ಶನಿವಾರ ದಂದು ಬೆಂಗಳೂರಿನ, ಮಲ್ಲತ್ತಹಳ್ಳಿಯ ಕಲಾಗ್ರಾಮದ ಸಮುಚ್ಚಯ ಭವನದಲ್ಲಿ ಸಂಜೆ 6.30 ಕ್ಕೆ ಪ್ರದರ್ಶಿಸಲಾಗುತ್ತಿದೆ.

ಏ.20 ಭಾನುವಾರ ದಂದು ಬೆಂಗಳೂರಿನ ಬಸವೇಶ್ವರ ನಗರ, ಕಮಲಾನಗರದ ಕೆ.ಇ.ಎ ಪ್ರಭಾತ್ ರಂಗಮಂದಿರದಲ್ಲಿ ಕರ್ನಾಟಕ ಇಂಜಿನಿಯರ್ಸ್ ಅಕಾಡೆಮಿ ಸಹಯೋಗದೊಂದಿಗೆ ಸಂಜೆ 5.30 ರಿಂದ 8.30 ರ ವರೆಗೆ ಪ್ರದರ್ಶನಗೊಳ್ಳಲಿದೆ.

ಕಾನೂನು, ಧರ್ಮಶಾಸ್ತ್ರ, ಸಾಕ್ಷೀ, ಪುರಾವೆಗಳ ಆಧಾರದಲ್ಲಿ, ಒಬ್ಬ ವ್ಯಕ್ತಿ ತಾನು ಸತ್ತಿಲ್ಲವೆಂದು ವಾದಿಸಿದರೆ, ಪ್ರತೀ ವಾದಿಯು ಅವನು ಸತ್ತಿದ್ದಾನೆಂದು ನ್ಯಾಯಾಲಯದಲ್ಲಿ ವಾದಿಸುವ ಮತ್ತು ನಿಗುಡತೆಯನ್ನು ಹಿಡಿದಿಟ್ಟುಕೊಂಡು ಹೋಗುವ ಕುತೂಹಲಕಾರಿ ನಾಟಕವಾಗಿದೆ.

ಎರಡೂ ನಾಟಕ ಪ್ರಯೋಗಗಳು ಉಚಿತ ಪ್ರದರ್ಶನವಾಗಿದ್ದು, ನಾಟಕಗಳನ್ನು ವೀಕ್ಷಿಸಿ ಕಲಾವಿದರನ್ನು ಪ್ರೋತ್ಸಾಹಿಸಬೇಕು ಎಂದು ಕನ್ನಡ ಕಲಾ ಸಂಘದ ಕಾರ್ಯದರ್ಶಿ ಕೋರಿದ್ದಾರೆ.

## ಮಾಸಾಶನ ಪಡೆಯುತ್ತಿರುವ ಸಾಹಿತಿ, ಕಲಾವಿದರು ಜೀವಂತ ಪ್ರಮಾಣ ಪತ್ರ ಸಲ್ಲಿಸಿ

**ಹಂಪಿ ಟೈಮ್ಸ್ ಕೊಪ್ಪಳ**

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಮಾಸಾಶನ ಪಡೆಯುತ್ತಿರುವ ಸಾಹಿತಿಗಳು, ಕಲಾವಿದರುಗಳು ಹಾಗೂ ವಿಧವೆಯರು ಜೀವಂತ ಪ್ರಮಾಣ ಪತ್ರವನ್ನು ಪಡೆದು, ಇಲಾಖೆ ನೀಡುವ ಅರ್ಜಿಯನ್ನು ಭರ್ತಿ ಮಾಡಿ ಏ.29ರೊಳಗೆ ಇಲಾಖೆ ಕಚೇರಿಗೆ ಅರ್ಜಿ ಸಲ್ಲಿಸಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ ಮರಬನಳ್ಳಿ ತಿಳಿಸಿದ್ದಾರೆ.

# ಆಮದು-ರಫ್ತು ಹೆಚ್ಚಳದಿಂದ ದೇಶದ ಆರ್ಥಿಕ ಪ್ರಗತಿ

## ಸಹಪ್ರಾಧ್ಯಾಪಕ ಡಾ.ಹರಾಳು ಬುಳ್ಳಪ್ಪ ಅಭಿಮತ | ವಿಶೇಷ ಉಪನ್ಯಾಸ ಕಾರ್ಯಕ್ರಮ



**ಹಂಪಿ ಟೈಮ್ಸ್ ಹೂವಿನಹಡಗಲಿ**

ಅಂತರಾಷ್ಟ್ರೀಯ ಸಂಬಂಧಗಳು ಒಂದು ದೇಶದ ಆರ್ಥಿಕ ಬೆಳವಣಿಗೆ ಮೇಲೆ ಪ್ರಭಾವ ಬೀರುತ್ತವೆ ಎಂದು ಹರಪನಹಳ್ಳಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಪ್ರಾಧ್ಯಾಪಕ ಡಾ.ಬುಳ್ಳಪ್ಪ ಅಭಿಪ್ರಾಯಪಟ್ಟರು.

ಪಟ್ಟಣದ ಜಿಬಿಆರ್ ಪದವಿ ಮಹಾವಿದ್ಯಾಲಯದ ಹಾನಗಲ್ಲ ಕುಮಾರೇಶ ಸಭಾಂಗಣದಲ್ಲಿ ಬುಧವಾರ ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದರು. ದೇಶದ ಆರ್ಥಿಕತೆಯು ವಿಶ್ವ ಮಾರುಕಟ್ಟೆಯಲ್ಲಿ ಸ್ಥಾನ ಪಡೆಯಬೇಕಾದರೆ ಒಂದು ದೇಶದಲ್ಲಿನ ಸಂಪನ್ಮೂಲವನ್ನು ಸಮರ್ಪಕವಾಗಿ ಬಳಕೆಯಾಗಬೇಕು. ದೇಶದಲ್ಲಿ ಕೈಗಾರಿಕೆಗಳ ಉತ್ಪನ್ನ ಮತ್ತು ಬೇಡಿಕೆಗಳಿಂದ ಆರ್ಥಿಕತೆ ಭದ್ರವಾಗುತ್ತದೆ. ನಾವು ವಿದೇಶಿ ವಿನಿಮಯವನ್ನು ಮಾಡಿಕೊಳ್ಳಲು ಮುಂದಾಗಬೇಕು. ಚರ್ಮ ಮತ್ತು ಔಷಧಿ ಉತ್ಪನ್ನಗಳು, ಆಟೋಮೊಬೈಲ್ ವಸ್ತುಗಳು, ಜೈವಿಕ ರಸಾಯನಿಕಗಳು, ಕೈಮಗ್ಗ ವಸ್ತುಗಳು, ಸಿರಿಧಾನ್ಯಗಳು ಸೇರಿದಂತೆ ಅನೇಕ ಕೃಷಿ ಉತ್ಪನ್ನಗಳನ್ನು ರಫ್ತುಮಾಡುತ್ತಿದ್ದೇವೆ. ದೇಶದ ಆರ್ಥಿಕ ಸ್ಥಿತಿ ಸುಧಾರಣೆಯಾಗಬೇಕಾದರೆ ದೇಶದ ಆಮದು ಮತ್ತು ರಫ್ತನ್ನು ಹೆಚ್ಚಿಸಬೇಕು ಎಂದರು.

ಪ್ರಾಚಾರ್ಯ ಎಸ್.ಎಸ್.ಪಾಟೀಲ ಮಾತ ನಾಡಿ, ಭಾರತ ಕೃಷಿ ಉತ್ಪನ್ನಗಳಲ್ಲಿ ಸ್ವಾವಲಂಬನೆಯನ್ನು ಕಾಣಬಹುದಾಗಿದೆ. ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಅಂತರಾಷ್ಟ್ರೀಯ ವ್ಯಾಪಾರ ಮುಖ್ಯವಾಗುತ್ತದೆ. ಅಂತರಾಷ್ಟ್ರೀಯ ವ್ಯಾಪಾರಕ್ಕೆ ಬೇರೆ ಬೇರ ಆಯಾಮಗಳಿವೆ ಎಂದರು. ಐಕ್ಯೂಎಸಿ ಸಂಯೋಜಕಿ ಡಾ.ಮಹಿಮಾಜ್ಯೋತಿ, ಸಹಾಯಕ ಪ್ರಾಧ್ಯಾಪಕರಾದ ರವಿಕುಮಾರ್, ಮೊಹಿದ್ದೀನ್ ಕೆ, ಡಾ.ಶರಣಪ್ಪ, ಶೇಕ್ಷಾವಲಿ, ಬಡೇಸಾಬ್‌ನಾಯಕ ಹಾಗೂ ವಿದ್ಯಾರ್ಥಿಗಳು ಇತರರಿದ್ದರು.




# ರಾಯಚೂರ ವಾರ್ತಾ ಇಲಾಖೆಯಿಂದ ಪಂಚ ಗ್ಯಾರಂಟಿ ಯಶೋಗಾಥೆ ವಿಶೇಷ ಕಿರುಹೊತ್ತಿಗೆ ಪ್ರಕಟ



■ **ಹಂಪಿ ಟೈಮ್ಸ್ ರಾಯಚೂರು**

ರಾಜ್ಯ ಸರ್ಕಾರದ ಮಹಾತ್ವಾಕಾಂಕ್ಷಿ ಪಂಚ ಗ್ಯಾರಂಟಿ ಯೋಜನೆಗಳ ಯಶೋಗಾಥೆ ಕುರಿತು ರಾಯಚೂರ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಎಡೆದೊರೆ ನಾಡಲ್ಲಿ ಪಂಚ ಗ್ಯಾರಂಟಿ ಯಶೋಗಾಥೆ ನುಡಿದಂತೆ ನಡೆದಿದ್ದೇವೆ ಕಿರು ಹೊತ್ತಿಗೆಯನ್ನು ಪ್ರಕಟಿಸಲಾಗಿದೆ.

ಅನ್ನಭಾಗ್ಯ, ಗೃಹಜ್ಯೋತಿ, ಗೃಹಲಕ್ಷ್ಮಿ, ಶಕ್ತಿ ಹಾಗೂ ಯುವನಿಧಿ ಯೋಜನೆಗಳು ಜಾರಿಯಾದ ಹಿನ್ನೆಲೆ, ಆಯಾ ಯೋಜನೆಗಳ ಆಶಯ, ಯೋಜನೆಗಳ ಉದ್ದೇಶ ಮತ್ತು ರಾಯಚೂರ ಜಿಲ್ಲೆಯಲ್ಲಿ ಆಯಾ ಯೋಜನೆಗಳ ಪ್ರಗತಿಯ ಅಂಕಿ ಅಂಶಗಳು ಮತ್ತು ಯೋಜನೆಗಳ ಅನುಕೂಲತೆಗಳನ್ನು ಪಡೆದುಕೊಂಡ ಕೆಲವು ಫಲಾನುಭವಿಗಳ ಅನಿಸಿಕೆಗಳು ಈ ಕಿರು ಹೊತ್ತಿಗೆಯಲ್ಲಿ ಪ್ರಕಟವಾಗಿವೆ.

ಮಾನ್ಯ ಮುಖ್ಯಮಂತ್ರಿಗಳಾದ ಸಿದ್ಧರಾಮಯ್ಯ ಹಾಗೂ ಉಪ ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ ಮತ್ತು ರಾಯಚೂರ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ ಅವರ ಸಂದೇಶಗಳು ಈ ಕಿರು ಹೊತ್ತಿಗೆಯಲ್ಲಿ ಪ್ರಕಟವಾಗಿವೆ.

ಸಚಿವರಿಂದ ಬಿಡುಗಡೆ: ಎಡೆದೊರೆ ನಾಡಲ್ಲಿ ಪಂಚ ಗ್ಯಾರಂಟಿ ಯಶೋಗಾಥೆ ನುಡಿದಂತೆ ನಡೆದಿದ್ದೇವೆ ಎಂಬ ರಾಯಚೂರ ಜಿಲ್ಲೆಯ ಕಿರುಹೊತ್ತಿಗೆಯನ್ನು ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಇತ್ತೀಚೆಗೆ ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಬಿಡುಗಡೆಗೊಳಿಸಿದರು.

ಈ ವೇಳೆ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು, ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರ್ವಿಹಾಳ, ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್, ಮಾನವಿ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯ ನಾಯಕ, ವಿಧಾನ ಪರಿಷತ್ ಶಾಸಕರಾದ ಎ.ವಸಂತಕುಮಾರ, ಬಸನಗೌಡ ಬಾದರ್ಲಿ, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ತುಕಾರಾಂ ಪಾಂಡ್ವೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಪುಟ್ಟಮಾದಯ್ಯ ಎಂ, ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ, ಆಯುಕ್ತರಾದ ಗಜಾನನ ಬಾಳೆ, ಬಸವಣೆಪ್ಪಾ ಕಲಶೆಟ್ಟಿ ಸೇರಿದಂತೆ ಇತರರು ಇದ್ದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

**ಈ ದಿನವನ್ನು ಈ ವರ್ಷ 'ಎಕ್ಸೆಸ್ ಫಾರ್ ಆಲ್; ವುಮೆನ್ ಆ್ಯಂಡ್ ಗರ್ಲ್ಸ್ ಬ್ಲೀಡ್ ಟೂ' ಎಂಬ ಥೀಮ್‌ನೊಂದಿಗೆ ವಿಶ್ವ ಹಿಮೋಫಿಲಿಯಾ ದಿನಾಚರಣೆ ಆಚರಿಸಲಾಗುತ್ತಿದೆ.**

# ಹಿಮೋಫಿಲಿಯಾ ಗುಣಲಕ್ಷಣಗಳು

ಹಿಮೋಫಿಲಿಯಾ ಎಂಬುದು ಒಂದು ಅನುವಂಶಿಕ ರಕ್ತಸ್ರಾವದ ಕಾಯಿಲೆಯಾಗಿದೆ. ವಿವಿಧ ರೀತಿಯ ರಕ್ತಸ್ರಾವ ಅಥವಾ ಹಿಮೋಪಿ ,ಲಿಯಾ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಪ್ರತಿ ವರ್ಷ ಏಪ್ರಿಲ್17ರಂದು ಜಗತ್ತಿನಾದ್ಯಂತ ವಿಶ್ವ ಹಿಮೋಫಿಲಿಯಾ ದಿನವನ್ನು ಆಚರಿಸಲಾಗುತ್ತದೆ. ವಿಶ್ವ ಹಿಮೋಫಿಲಿಯಾ ಸಂಸ್ಥೆಯು ಜಾಗತಿಕವಾಗಿ ಹಿಮೋಫಿಲಿಯಾ ರೋಗಿಗಳ ಶುಶ್ರೂಷೆ ಮತ್ತು ಚಿಕಿತ್ಸೆಯ ಬಗ್ಗೆ ಜಾಗೃತಿ ಮೂಡಿಸುವ ಕೆಲಸವನ್ನು ಸದ್ದಿಲ್ಲದೇ ಮಾಡುತ್ತದೆ. ಈ ಸಂಸ್ಥೆಯು 1963ರಲ್ಲಿ ಫ್ರ್ಯಾಂಕ್ ಸ್ಕ್ನಾಬೆಲ್ ಎಂಬುವವರಿಂದ ಸ್ಥಾಪನೆಯಾಯಿತು. ಫ್ರ್ಯಾಂಕ್ ಸ್ಕ್ನಾಬೆಲ್ ಅವರ ಜನ್ಮದಿನದ ಗೌರವಾರ್ಥವಾಗಿ ಏಪ್ರಿಲ್ 17 ರಂದೇ ವಿಶ್ವ ಹಿಮೋಫಿಲಿಯಾ ದಿನವನ್ನು ಆಚರಿಸಲಾಗುತ್ತದೆ. ಈ ದಿನವನ್ನು 1989ರಿಂದ ಭಾರತ ಸೇರಿದಂತೆ ವಿವಿಧ ದೇಶಗಳಲ್ಲಿ ಆಚರಣೆ ಮಾಡಲಾಗುತ್ತಿದೆ. 1803ರಲ್ಲಿ ಫಿಲಡೆಲ್ಫಿಯಾದ ಡಾ. ಜಾನ್ ಕಾನ್ರಾಡ್ ಒಟ್ಟೊ ಎಂಬುವರು ರಕ್ತಸ್ರಾವಕಾಕರಕಗಳ ಬಗ್ಗೆ ಸಂಶೋಧನೆ ಪ್ರಾರಂಭಿಸಿ ದರು. ಅವರು ಅಂತಿಮವಾಗಿ ಈ ರೋಗವು ತಾಯಂದಿರಿಂದ ಗಂಡು ಮಕ್ಕಳಿಗೆ ಹರಡುತ್ತದೆ ಎಂದು ತೀರ್ಮಾನಿಸಿದರು. 1937ರಲ್ಲಿ ಹಿಮೋಫಿಲಿಯಾವನ್ನು ಎ ಅಥವಾ ಬಿ ಪ್ರಕಾರದ ಅನುವಂಶಿಕ ಅಸ್ವಸ್ಥತೆ ಎಂದು ವರ್ಗೀಕರಿಸಲಾಯಿತು. 'ಹೈಮೊ' ಎಂಬ ಗ್ರೀಕ್ ಪದದಿಂದ ಹುಟ್ಟಿಕೊಂಡ ಈ ಶಬ್ದಕ್ಕೆ ರಕ್ತ ಎಂಬ ಅರ್ಥವಿದೆ ಮತ್ತು 'ಫೀಲಿಯಾ' ಎಂದರೆ ಪ್ರೀತಿ ಎಂಬ ಅರ್ಥವಿದೆ. ರಕ್ತವನ್ನು ಪ್ರೀತಿಸುವ ಎಂಬ ಅರ್ಥವನ್ನು ನೀಡುವುದರಿಂದ 'ಹಿಮೋಫಿಲಿಯಾ' ಎಂದು ಕರೆಯುವರು. ಪ್ರತಿ ವರ್ಷ ಒಂದು ನಿರ್ದಿಷ್ಟ ಥೀಮ್‌ನೊಂದಿಗೆ ಆಚರಿಸಲಾಗುವ ಈ ದಿನವನ್ನು ಈ ವರ್ಷ 'ಎಕ್ಸೆಸ್ ಫಾರ್ ಆಲ್; ವುಮೆನ್ ಆ್ಯಂಡ್ ಗರ್ಲ್ಸ್ ಬ್ಲೀಡ್ ಟೂ' ಎಂಬ ಥೀಮ್‌ನೊಂದಿಗೆ ಆಚರಿಸಲಾಗುತ್ತಿದೆ. ರಕ್ತ ಹೆಪ್ಪುಗಟ್ಟಲು ಸುಮಾರು 13 ರಕ್ತಹೆಪ್ಪುಗಟ್ಟುವ ಘಟಕಗಳು ಒಂದಕ್ಕೊಂದು ಪೂರಕವಾಗಿ ಕೆಲಸ ಮಾಡುತ್ತಿರುತ್ತವೆ. ಈ ಘಟಕಗಳಲ್ಲಿ ಯಾವುದಾದರೊಂದು ಸರಿಯಾಗಿ ಕೆಲಸ ನಿರ್ವಹಿಸದಿದ್ದಲ್ಲಿ ಅಥವಾ ಘಟಕಗಳ ಕೊರತೆ ಉಂಟಾದಲ್ಲಿ ರಕ್ತ ಹೆಪ್ಪುಗಟ್ಟುವ ಕ್ರಿಯೆಗೆ ಅಡ್ಡಿಯಾಗುತ್ತದೆ. ರಕ್ತ ಹೆಪ್ಪುಗಟ್ಟದೇ ಇರುವುದನ್ನೇ ಹಿಮೋಫಿಲಿಯಾ ಅಥವಾ ಕನ್ನಡದಲ್ಲಿ ಇದಕ್ಕೆ ಕುಸುಮ ರೋಗ ಎಂದು ಕರೆಯುತ್ತೇವೆ. ತಾಯಿಯಿಂದ ಮಗನಿಗೆ ಬಳುವಳಿಯಾಗಿ ಬರುವ ಕಾಯಿಲೆ ಇದಾಗಿದೆ. ಎಕ್ಸ್–ಎಂಬ ವರ್ಣತಂತುಗಳಲ್ಲಿ ಈ ರೋಗ ಸಾಗಿಸಲ್ಪಡುವುದರಿಂದ ಇದು ಪುರುಷರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಮಹಿಳೆಯರಲ್ಲಿ ಈ ರೋಗ ಬರುವ ಸಾಧ್ಯತೆ ಕಡಿಮೆ ಇರುತ್ತದೆ ಎಂದು ಅಂದಾಜಿಸಲಾಗಿದೆ. ಯಾವುದೇ ಒಬ್ಬ ವ್ಯಕ್ತಿಯ ದೇಹಕ್ಕೆ ಗಾಯವಾದಾಗ ರಕ್ತ ಹೊರಬರುವುದು ಸಾಮಾನ್ಯ. ಈ ರಕ್ತವು ಬೇಗನೇ ಹೆಪ್ಪುಗಟ್ಟುವ ಗುಣವನ್ನು ಹೊಂದಿರುವುದರಿಂದ ದೊಡ್ಡ ಪ್ರಮಾಣದ ಅಥವಾ ಸಾವು ತರುವ ಮಟ್ಟಿಗೆ ರಕ್ತ ಸ್ರಾವ ಉಂಟಾಗುವುದಿಲ್ಲ. ಹೀಗಾಗಿ ಚಿಕ್ಕಪುಟ್ಟ ಗಾಯವಾದಾಗ ಭಯಪಡುವ ಅಗತ್ಯವಿರುವುದಿಲ್ಲ. ಆದರೆ ಹಿಮೋಫಿಲಿಯಾ ರೋಗ ಇರುವವರಲ್ಲಿ ರಕ್ತಹೆಪ್ಪುಗಟ್ಟುವುದಿಲ್ಲ. ಅಂದರೆ ಒಂದು ಚಿಕ್ಕ ಗಾಯವಾದರೂ ತೀವ್ರವಾದ ರಕ್ತಸ್ರಾವ ಉಂಟಾಗಿ ಸಾವು ಸಂಭವಿಸುವ ಅಪಾಯವೂ ಹೆಚ್ಚಾಗಿರುತ್ತದೆ. ಹೀಗಾಗಿ ಹಿಮೋಫಿಲಿಯಾದಿಂದ ಬಳಲುವವರು ಯಾವುದೇ ಗಾಯವಾಗದಂತೆ ಸಾಕಷ್ಟು ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ.



ಇಂದು ವಿಶ್ವ ಹಿಮೋಫಿಲಿಯಾ ದಿನ



ರಾಜು. ಭೂಶೆಟ್ಟಿ
ಲೇಖಕರು, ಹುಬ್ಬಳ್ಳಿ

Scan For Digital Colourful
HAMPI TIMES E-paper

ಹಿಮೋಫಿಲಿಯಾದಲ್ಲಿ ಎ,ಬಿ,ಸಿ ಎಂಬ ಮೂರು ವಿಧಗಳಿವೆ. ರೋಗದ ತೀವ್ರತೆಗೆ ತಕ್ಕಂತೆ ಸೌಮ್ಯ, ಸಾಧಾರಣ ಮತ್ತು ತೀವ್ರ ಹಿಮೋಫಿಲಿಯಾ ಎಂದು ವಿಂಗಡಿಸಲಾಗಿದೆ. ರಕ್ತ ಹೆಪ್ಪುಗಟ್ಟಲು ನೆರವಾಗುವ 13 ಫ್ಯಾಕ್ಟರ್‌ಗಳಲ್ಲಿ 8ನೇ ಫ್ಯಾಕ್ಟರ್ ಅಥವಾ ಘಟಕ ಕಡಿಮೆ ಇದ್ದರೆ ಅದನ್ನು 'ಟೈಪ್‌ಎ' ಎಂದು ಕರೆಯುವರು. 9ನೇ ಫ್ಯಾಕ್ಟರ್ ಅಥವಾ ಘಟಕ ಕಡಿಮೆ ಇದ್ದರೆ ಅದನ್ನು 'ಟೈಪ್‌ಬಿ' ಎಂದೂ, 11ನೇ ಫ್ಯಾಕ್ಟರ್ ಅಥವಾ ಘಟಕ ಕಡಿಮೆ ಇದ್ದರೆ ಅದನ್ನು 'ಟೈಪ್‌ಸಿ' ಎಂದೂ ಕರೆಯಲಾಗುತ್ತದೆ. ಇವುಗಳಲ್ಲಿ 'ಟೈಪ್–ಎ' ಹಿಮೋಫಿಲಿಯಾ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಟೈಪ್‌ಬಿ ಮತ್ತು ಸಿ ಹಿಮೋಫಿಲಿಯಾ ಕಾಯಿಲೆ ಅಪರೂಪವಾಗಿ ಕಾಣಿಸಿಕೊಳ್ಳುತ್ತದೆ.

ಇದರ ಕೆಲವು ಲಕ್ಷಣಗಳನ್ನು ನೋಡುವುದಾದರೆ ಹಿಮೋಫಿಲಿಯಾ ಇದ್ದಾಗ ಗಂಟು, ಕೀಲು, ಸ್ನಾಯು ಮತ್ತು ಮಾಂಸಖಂಡಗಳಲ್ಲಿ ರಕ್ತಸ್ರಾವವಾಗಬಹುದು. ಮೂಗಿನಲ್ಲಿ, ಹಲ್ಲಿನ ವಸಡಿನಲ್ಲಿಯೂ ರಕ್ತಸ್ರಾವ, ಸಂಧಿ ನೋವು, ಊತ, ಕೆಲವರಿಗೆ ಮಲ, ಮತ್ತು ಮೂತ್ರದಲ್ಲಿಯೂ ರಕ್ತಸ್ರಾವವಾಗಬಹುದು. ಇಂತಹ ಸಂದರ್ಭಗಳಲ್ಲಿ ತಜ್ಞ ವೈದ್ಯರನ್ನು ಭೇಟಿ ಮಾಡುವುದು ಸೂಕ್ತ ಕ್ರಮವಾಗಿರುತ್ತದೆ. ಮೊಣಕಾಲು, ಹಿಂಗಾಲು ಮತ್ತು ಮೊಣಕೈಗಳಲ್ಲಿ ದೀರ್ಘಕಾಲ ರಕ್ತಸ್ರಾವ ಇದ್ದರೆ ಮೃದ್ವಸ್ಥಿ ಮತ್ತು ಮೂಳೆಗಳಿಗೆ ಹಾನಿ ಉಂಟಾಗುತ್ತದೆ. ಇದರಿಂದಾಗಿ ದೀರ್ಘಕಾಲಿಕ ಸಂಧಿವಾತ ಮತ್ತು ಗಂಟು ಸಮಸ್ಯೆಯು ಕೂಡ ಬರಬಹುದು.

ಒಟ್ಟಾರೆಯಾಗಿ, ಕಾಯಿಲೆ ಯಾವುದೇ ಸ್ವರೂಪದ್ದಾದರೂ ಹೀಗೇಕಾಯಿತು? ಎಂದು ಅದರ ಬಗ್ಗೆಯೇ ತೀವ್ರವಾದ ಚಿಂತೆಗೆ ಒಳಗಾಗುವುದರಿಂದ ಯಾವುದೇ ಪ್ರಯೋಜನವಿಲ್ಲ. ಅದರ ಬದಲು ಕಾಯಿಲೆಯ ಬಗ್ಗೆ ಸಂಪೂರ್ಣ ತಿಳುವಳಿಕೆಯನ್ನು ಮತ್ತು ತಜ್ಞ ವೈದ್ಯರಿಂದ ಚಿಕಿತ್ಸೆಯನ್ನು ಪಡೆದುಕೊಂಡು ಭಯರಹಿತವಾಗಿ ಜೀವನವನ್ನು ಮುನ್ನಡೆಸುವುದು ತುಂಬಾ ಅಗತ್ಯವಾಗಿದೆ.

# ಇಲ್ಲಿ ಗುಣವೇ ಮುಖ್ಯ, ಉಳಿದೆಲ್ಲವೂ ಗೌಣ

ಮುಖ ಪುಸ್ತಕದಲ್ಲಿ ಓದಿದ ಈ ಕಥೆ ನಿಜವಾಗಿಯೂ ಬದುಕಿನ ಕುರಿತ ವಿಭಿನ್ನ ಚಿಂತನೆಗೆ ಅವಕಾಶ ಮಾಡಿಕೊಟ್ಟಿದೆ.

ಇದೊಂದು ಚೀನಿ ಕಥೆ. ಓರ್ವ ರೈತ ಕುದುರೆ ಯೊಂದನ್ನು ಸಾಕಿದ್ದ. ಒಂದು ದಿನ ಆತನ ಕುದುರೆ ಕಾಣೆಯಾಯಿತು. ಆತನ ಮನೆಯ ಸುತ್ತಲ ಜನ ಬಂದು ಆತನನ್ನು ಭೇಟಿಯಾಗಿ ಆತನಿಗೆ ನಿನ್ನ ಕುದುರೆ ಕಳೆದುಹೋದದ್ದನ್ನು ಕೇಳಿ ದುಃಖವಾಯಿತು, ಸಮಾಧಾನ ತಂದುಕೊ ಎಂದು ಸಾಂತ್ವನ ಹೇಳಿದರು. ಸುಮ್ಮನೆ ಗೋಣಾಡಿಸಿದ ರೈತನನ್ನು ಕಂಡು ಆತನ ನೋವು ತೀವ್ರವಾಗಿದೆ ಎಂದು ಭಾವಿಸಿದ ಅವರು ಇದಕ್ಕಿಂತ ನಿನಗೆ ಒಳ್ಳೆಯ ಕುದುರೆ ಸಿಗಬಹುದು ಎಂದು ಸಮಾಧಾನ ಹೇಳಿದರು. ಇದಕ್ಕೆ ಆ ರೈತ ಅತ್ಯಂತ ಸರಳವಾಗಿ 'ಹೌದು ಇರಬಹುದು' ಎಂದು ಹೇಳಿದ.

ಮರುದಿನ ಆತನ ಕುದುರೆ ಮರಳಿ ಬಂತು... ಆದರೆ ಆ ಕುದುರೆಯ ಜೊತೆ ಏಳು ಕಾಡು ಕುದುರೆಗಳು ಕೂಡ ಬಂದಿದ್ದವು. ಸುತ್ತಲ ಮನೆಯವರು ನೋಡಿದೆಯಾ ನಾವು ಹೇಳಿದಂತೆಯೇ ಆಯಿತು, ನಿನಗೆ ಒಂದು ಕುದುರೆಯ ಬದಲಾಗಿ ಏಳು ಕುದುರೆಗಳು ದೊರೆಯಿತು ಒಳ್ಳೆಯದೇ ಅಲ್ವಾ ಎಂದು ಹೇಳಿದ.

ಇರಬಹುದು ಎಂದು ಮತ್ತೆ ಅಷ್ಟೇ ಸರಳವಾಗಿ ರೈತ ಉತ್ತರಿಸಿದ.

ಮರುದಿನ ರೈತನ ಮಗ ಕಾಡು ಕುದುರೆಗಳಲ್ಲಿ ಒಂದು ಕುದುರೆಯನ್ನು ಊರಲು ಪ್ರಯತ್ನಿಸಿ ವಿಫಲನಾಗಿ ಕುದುರೆಯ ಮೇಲಿಂದ ಬಿದ್ದು ಕಾಲು ಮುರಿದುಕೊಂಡ. ಆಗ ಆತನ ಸುತ್ತಣ ಜನ ಅಯ್ಯೋ ನಿನಗೆ ಈ ಕಾಡು ಕುದುರೆಗಳಿಂದ ತೊಂದರೆಯಾಯಿತು ಅಲ್ಲವೇ ಎಂದು ಕೇಳಿದರು.

ರೈತನದು ಮತ್ತದೇ ಉತ್ತರ 'ಇರಬಹುದು' ಎಂದಾಗಿತ್ತು. ಕೆಲ ದಿನಗಳ ನಂತರ ಚೀನಾದ ಸೇನೆಯ ಮುಖಂಡನ ನೇತೃತ್ವದಲ್ಲಿ ಎಲ್ಲ ಯುವಕರನ್ನು ಸೇನೆಗೆ ಸೇರಿಸಿಕೊಳ್ಳಲು ಕರೆದೊಯ್ದರು. ಆದರೆ ಕಾಲು ಮುರಿದ ಕಾರಣ ರೈತನ ಮಗನನ್ನು ಬಿಟ್ಟು ಹೋದರು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ತಮ್ಮ ಮಕ್ಕಳನ್ನು ಕಳಿಸಿದ ನೆರೆಹೊರೆಯ ಜನ ರೈತನ ಮಗ ಸೇನೆಯನ್ನು ಸೇರುವುದು ತಪ್ಪಿದ ಕಾರಣ ಆತನನ್ನು ಅಭಿನಂದಿಸಿದರು.

ರೈತ ಮತ್ತದೇ ಮುಗ್ಧ ನಗುವನ್ನು ಸೂಚಿಸುತ್ತಾ ಹೇಳಿದ ಇರಬಹುದು ಎಂದು.

ಇಂದು ಯಾವ ವಿಷಯಗಳು ನಮ್ಮನ್ನು ಹಿಂಜರಿಯುವಂತೆ ಮಾಡುತ್ತವೆಯೋ ಅದೇ ಮುಂದೆ ನಮಗೆ ಗೆಲುವಿಗೆ ದಾರಿಯಾಗುತ್ತದೆ. ಇಂದು ಗೆಲುವೆಂದು ತೋರಿದ್ದು



ಮುಂದೆ ಸೋಲಿಗೆ ದಾರಿಯಾಗ ಬಹುದು ಮತ್ತು ಇಂದು ಸೋಲಾಗಿದ್ದು ನಾಳೆ ಗೆಲುವಿಗೆ ದಾರಿಯಾಗ ಬಹುದು.. ಯಾವುದೇ ವಿಷಯಕ್ಕೂ ಅತ್ಯಂತ ತೀವ್ರವಾಗಿ ಪ್ರತಿಕ್ರಿಯಿ ಸುವುದಾಗಲಿ, ನಿರ್ಣಯಿಸುವುದಾಗಲಿ ಮಾಡಬಾರದು. ಇಂದಿನ ಸೋಲೇ ನಾಳಿನ ಗೆಲುವಿಗೆ ಸೋಪಾನ. ಶಾಂತವಾಗಿ ಗುರಿಯೆಡೆಗೆ ತೀವ್ರವಾದ ಲಕ್ಷವಿಟ್ಟು ಸಮಾಧಾನದಿಂದ ನಿಮ್ಮ ಪ್ರಯತ್ನವನ್ನು ನಿರಂತರವಾಗಿ ಮಾಡಿ, ಫಲ ಖಂಡಿತವಾಗಿಯೂ ದೊರೆಯುತ್ತದೆ.

ಬೇಕಿದ್ದಂತಹ ಬದುಕು ನಮಗೆ ಯಾವಾಗಲೂ ಸಿಗುವುದಿಲ್ಲ ಬದುಕಿನಲ್ಲಿ ಬರುವ ಕಷ್ಟಗಳನ್ನು ನಮಗೆ ಒದಗಿದ ಪರೀಕ್ಷೆಗಳೆಂದು, ಸುಖವನ್ನು ನಾವು ಮಾಡಿರುವ ಪರಿಶ್ರಮಕ್ಕೆ ತಕ್ಕ ಫಲವೆಂದು ಅರಿತು ಜೀವಿಸಬೇಕು. 'ಸುಖ–ದುಃಖ ಸಮೇಕೃತಾ' ಎಂಬ ಸಂಸ್ಕೃತ ಉಕ್ತಿಯಂತೆ ಬದುಕಿನಲ್ಲಿ ಬರುವ ಕಷ್ಟ ಸುಖಗಳನ್ನು ಸಮನಾಗಿ ಸ್ವೀಕರಿಸಿ ಸುಖಕ್ಕೆ ಹಿಗ್ಗದೆ ಕಷ್ಟಕ್ಕೆ ಕುಗ್ಗದೆ ಬದುಕಿ ತೋರಬೇಕು.

ಇದ್ದಾಗ ಅತಿಯಾಗಿ ವರ್ತಿಸದೆ ಕಳೆದುಕೊಂಡಾಗ ಗೋಳಾಡದೆ ಎಲ್ಲವನ್ನೂ ಸಮಚಿತ್ತದಿಂದ ಸ್ವೀಕರಿಸಬೇಕು. ಬಡವನನ್ನು ತಿರಸ್ಕರಿಸದೆ ಶ್ರೀಮಂತರನ್ನು ಪುರಸ್ಕರಿಸದೆ ಅವರ ಗುಣಕ್ಕೆ ಬೆಲೆ ನೀಡಬೇಕೆ ಹೊರತು ಅವರ ಐಹಿಕ ಜೀವನ ಶೈಲಿಗೆ ಅಲ್ಲ ಎಂಬ ಮಾತು ಸದಾ ನೆನಪಿನಲ್ಲಿರಬೇಕು.

ಎಲ್ಲ ಬಡವರನ್ನು ನಿಕೃಷ್ಟವಾಗಿ ಎಲ್ಲ ಶ್ರೀಮಂತರನ್ನು ಉತ್ಕೃಷ್ಟರಾಗಿ ಒಂದೇ ತಕ್ಕಡಿಯಲ್ಲಿ ತೂಗಬಾರದು. ಇಲ್ಲಿ ಗುಣವೇ ಮುಖ್ಯ, ಉಳಿದೆಲ್ಲವೂ ಗೌಣ.

ಹಂಸವೊಂದು ನೀರನ್ನು ಬೆರೆಸಿದ ಹಾಲಿನಲ್ಲಿ ಕೇವಲ ಹಾಲನ್ನು ಮಾತ್ರ ಸ್ವೀಕರಿಸುವ ಹಂಸಕ್ಷಿರ ನ್ಯಾಯದಂತೆ ನಾವು ಕೆಟ್ಟವರಲ್ಲಿನ ಒಳ್ಳೆಯ ಗುಣಗಳನ್ನು ಮಾತ್ರ ಗುರುತಿಸಬೇಕು.

ಹುಟ್ಟಿದ ಪ್ರತಿಯೊಬ್ಬ ಮನುಷ್ಯನು ಸಾಯಲೇಬೇಕು. ರಾಜಾದಿ ರಾಜರು ಧನ–ಕನಕಗಳನ್ನು, ವಜ್ರ– ವೈಡೂರ್ಯಗಳನ್ನು, ಕುದುರೆ ಆನೆಗಳ ಚತುರಂಗ ಬಲವನ್ನು ತಮ್ಮ ಸಾವಿನೊಂದಿಗೆ ಒಯ್ಯುವುದಿಲ್ಲ. ಬಡವರೂ ಅಷ್ಟೇ. ಹುಟ್ಟುವಾಗ ನಗ್ನತೆಯನ್ನು ಹೊತ್ತು ಬಂದಷ್ಟೇ ಸಹಜವಾಗಿ ಸಾವಿನಲ್ಲೂ ಕೂಡ ನಾವು ಎಲ್ಲವನ್ನು ತೊರೆದೇ ಹೋಗುತ್ತೇವೆ.

ಇರಬೇಕು ಇರುವಂತೆ ತೊರೆದು ಸಾವಿರ ಚಿಂತೆ
ಮಳೆ ಸುರಿಸಿ ಹಗುರಾದ ಮುಗಿಲಿನಂತೆ
ಎಂಬ ಕವನದಂತೆ ನಾವು ಕೂಡ ನಮ್ಮ ಬದುಕಿನಲ್ಲಿ
ಮುನ್ನಡೆಯಬೇಕು. ಅಲ್ಲವೇ ಸ್ನೇಹಿತರೆ?

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No. 15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

# ಗ್ಯಾರಂಟಿ ಯೋಜನೆಗಳು ಬಡವರ ಏಳ್ಗೆಗೆ ಪೂರಕ

## ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಕೆ.ಇ ಚಿದಾನಂದಪ್ಪ ಹೇಳಿಕೆ

■ ಹಂಪಿ ಟೈಮ್ಸ್ ಬಳ್ಳಾರಿ

ರಾಜ್ಯ ಸರ್ಕಾರದ ಪಂಚಗ್ಯಾರಂಟಿ ಯೋಜನೆಗಳಿಂದ ಬಡ ಜನರ ಏಳ್ಗೆಗೆ ಪೂರಕವಾಗಿದ್ದು, ಯೋಜನೆಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಗ್ರಾಪಂ ಮಟ್ಟದಲ್ಲಿ ಗ್ಯಾರಂಟಿ ಯೋಜನೆಗಳ ಅರಿವು ಮತ್ತು ಪ್ರಚಾರ ಮೂಡಿಸುವ ಕಾರ್ಯವಾಗಬೇಕು ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಚಿದಾನಂದಪ್ಪ ಕೆ.ಇ ಅವರು ಹೇಳಿದರು.

ನಗರದ ಜಿಲ್ಲಾ ಪಂಚಾಯತ್‌ನ ಹಳೆಯ ನಜೀರ್ ಸಭಾಂಗಣದಲ್ಲಿ ಬುಧವಾರ ಏರ್ಪಡಿಸಿದ್ದ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕಡುಬಡವರು ಮತ್ತು ಅಹಾಯಕ ಕುಟುಂಬಗಳಿಗಾಗಿಯೇ ನೆರವು ನೀಡಲು ರಾಜ್ಯ ಸರ್ಕಾರವು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದೆ. ಈಗಾಗಲೇ ಗ್ಯಾರಂಟಿ ಯೋಜನೆಗಳಿಂದ ಸಾಕಷ್ಟು ಪ್ರಮಾಣದ ಅರ್ಹರು ಇದರ ಲಾಭ ಪಡೆಯುತ್ತಿದ್ದಾರೆ. ಅದೇರೀತಿಯಾಗಿ ಹೊರಗುಳಿದ ಅರ್ಹ ಫಲಾನುಭವಿಗಳನ್ನು ಗುರುತಿಸಿ, ಗ್ಯಾರಂಟಿ ಯೋಜನೆಗಳ ಲಾಭ ತಲುಪಿಸಲು ಅಧಿಕಾರಿಗಳು ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ತಿಳಿಸಿದರು.

ಮುಂದಿನ ದಿನಗಳಲ್ಲಿ ಗ್ಯಾರಂಟಿ ಯೋಜನೆಗಳನ್ನು ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಮೂಲಕ ಶೇ.100ರಷ್ಟು ಪ್ರಗತಿ ಸಾಧಿಸಬೇಕು ಎಂದರು.

ಗೃಹಲಕ್ಷ್ಮಿ ಯೋಜನೆಯಡಿ ನೋಂದಣಿಯಾದ ಫಲಾನುಭವಿಗಳಿಗೆ ಆಗಸ್ಟ್ 2023 ರಿಂದ ಡಿಸೆಂಬರ್ 2024 ರವರೆಗೆ ರೂ.2,000 ರಂತೆ ಒಟ್ಟು 43,92,946 ಫಲಾನುಭವಿಗಳಿಗೆ ಮಾಹೆವಾರು ಒಟ್ಟು 878,58,92,000 ರೂ. ಗಳು ಸರ್ಕಾರದಿಂದ ನೇರವಾಗಿ ಫಲಾನುಭವಿಗಳ ಖಾತೆಗಳಿಗೆ ವರ್ಗಾವಣೆ ಮಾಡಲಾಗಿದೆ. 2025 ರ ಜನವರಿ ತಿಂಗಳ ಹಣವು ಪಾವತಿಯಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ವಿಜಯ್‌ಕುಮಾರ್ ಅವರು ಸಭೆಗೆ ತಿಳಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹ್ಯಾರೀಸ್ ಸುಮೈರ್ ಅವರು ಪ್ರತಿಕ್ರಿಯಿಸಿ, ಗೃಹಲಕ್ಷ್ಮಿ ಯೋಜನೆಯಡಿ ನೋಂದಾಯಿಸಿ ಕೊಂಡ ಫಲಾನುಭವಿಗಳಲ್ಲಿ ಎನ್‌ಪಿಸಿಐ ಸಮಸ್ಯೆ, ತೀರಿಹೋದವರು ಮತ್ತು ಐಟಿ-ಜಿಎಸ್‌ಟಿ ಸಂಬಂಧಿತ ಕಾರಣಗಳಿಂದ ಸೌಲಭ್ಯ ವಂಚಿತರಾದ ಫಲಾನುಭವಿಗಳ ನಿಖರ ಮಾಹಿತಿ ಕಂಡುಕೊಳ್ಳಬೇಕು. ಇದರಿಂದ ಯೋಜನೆಯ ಹಣ ಪೋಲಾಗದಂತೆ ತಡೆಯಬಹುದು ಎಂದು ತಿಳಿಸಿದರು.



### ಫಲಾನುಭವಿಗಳೊಂದಿಗೆ ಸಂವಾದ ಕಾರ್ಯಕ್ರಮ ಆಯೋಜಿಸಿ:

ರಾಜ್ಯ ಸರ್ಕಾರ ಜಾರಿಗೊಳಿಸಿರುವ ಪಂಚ ಗ್ಯಾರಂಟಿ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸಲು ಮತ್ತು ವಂಚಿತರಾಗದಂತೆ ಮಾಡಲು ಗ್ಯಾರಂಟಿ ಯೋಜನೆಗಳ ಬಗೆಗಿನ ತಾಂತ್ರಿಕ ದೋಷಗಳನ್ನು ನಿವಾರಿಸಲು ಗ್ರಾಮ ಸಭೆಗಳಂತೆ ಆಯಾ ಗ್ರಾಮ ಪಂಚಾಯತ್ ಮಟ್ಟದಲ್ಲಿ ಗ್ಯಾರಂಟಿ ಫಲಾನುಭವಿಗಳೊಂದಿಗೆ ಸಂವಾದ ಕಾರ್ಯಕ್ರಮ ಆಯೋಜಿಸಬೇಕು ಎಂದು ಐದು ತಾಪಂ ಇಒ ಗಳಿಗೆ ಜಿಪಂ ಸಿಇಒ ಮತ್ತು ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷರು ನಿರ್ದೇಶನ ನೀಡಿದರು.

ಎನ್‌ಪಿಸಿಐ ಲಿಂಕ್ ಆಗದ ಫಲಾನುಭವಿಗಳು ಮತ್ತು ಫಲಾನುಭವಿಗಳ ವಯೋಸಹಜದಿಂದ ಮರಣ ಹೊಂದಿದವರ ಮಾಹಿತಿ ಗುರುತಿಸಲು ತಾಪಂ ಇಒ, ಗ್ರಾಪಂ ಪಿಡಿಒ ಮತ್ತು ಲೀಡ್ ಬ್ಯಾಂಕ್ ಅಧಿಕಾರಿಗಳನ್ನೊಂಡು ಗ್ರಾಪಂ ಮಟ್ಟದಲ್ಲಿ ವಿಶೇಷ ಕ್ಯಾಂಪೇನ್ ಗಳನ್ನು ಆಯೋಜಿಸಬೇಕು ಎಂದು ನಿರ್ದೇಶನ ನೀಡಿದರು.

ಅನ್ನಭಾಗ್ಯ ಯೋಜನೆಯಡಿ ಜುಲೈ 2023 ರಿಂದ ಡಿಸೆಂಬರ್ 2024 ರವರೆಗೆ ಜಿಲ್ಲೆಯಲ್ಲಿ ಒಟ್ಟು 1,81,10,436 ಫಲಾನುಭವಿಗಳಿಗೆ ಇದುವರೆಗೂ ಒಟ್ಟು 292.29 ಕೋಟಿ ರೂ. ಗಳ ಸಹಾಯಧನ ನೀಡಲಾಗಿದೆ. 2025ರ ಜನವರಿ ಮಾಹೆಯ ಡಿಬಿಟಿ ಯ ಅನುದಾನ ಬಿಡುಗಡೆಯಾಗಿಲ್ಲ, ಉಳಿದ ಫೆಬ್ರವರಿ ಮತ್ತು ಮಾರ್ಚ್ ಮಾಹೆಯ ಹೆಚ್ಚುವರಿ ಅಕ್ಕಿಯನ್ನು ರಾಜ್ಯ ಸರ್ಕಾರವು ನಿರ್ದೇಶನದಂತೆ ಅಕ್ಕಿ ವಿತರಿಸಲಾಗಿದೆ ಎಂದು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕರಾದ ಸಕೀನಾ ಅವರು ಸಭೆಗೆ ತಿಳಿಸಿದರು.

ಅಧ್ಯಕ್ಷರಾದ ಚಿದಾನಂದಪ್ಪ ಅವರು ಮಾತನಾಡಿ, ಜಿಲ್ಲೆಯಲ್ಲಿ ಹೆಚ್ಚಾಗಿ ಅಕ್ರಮ ಪಡಿತರ ಸಾಗಾಣೆ ಸಂಬಂಧಿಸಿದಂತೆ ಪ್ರಕರಣಗಳು ದಾಖಲಾಗುತ್ತಿದ್ದು, ಇದಕ್ಕೆ ಕಡಿವಾಣ ಹಾಕಬೇಕಿದೆ ಎಂದು ಸೂಚಿಸಿದರು.

ಜಿಲ್ಲೆಯಲ್ಲಿ ಒಟ್ಟು 3,18,885 ಅರ್ಹ ಗ್ರಾಹಕರಿದ್ದು, ಅದರಲ್ಲಿ ಈವರೆಗೆ (ಮಾ.31 ರ ವರೆಗೆ) 2,82,956 ಗ್ರಾಹಕರು ನೋಂದಣಿ ಮಾಡಿಕೊಂಡಿದ್ದಾರೆ. 35,929 ಗ್ರಾಹಕರು ನೋಂದಾಯಿಸಲು ಬಾಕಿಯಿದ್ದಾರೆ. ಸರ್ಕಾರವು 2023ರ ಆಗಸ್ಟ್‌ನಿಂದ 2025ರ ಮಾರ್ಚ್ ವರೆಗೆ ಒಟ್ಟು 277.02 ಕೋಟಿ ರೂ. ಪಾವತಿಸಿದೆ ಎಂದು ಜೆಸ್ಕಾಂ ಇಲಾಖೆಯ ಅಧಿಕಾರಿಗಳು ಸಭೆಗೆ ತಿಳಿಸಿದರು.

ಇದಕ್ಕೆ ಅಧ್ಯಕ್ಷರು ಪ್ರತಿಕ್ರಿಯಿಸಿ, ಜಿಲ್ಲೆಯಲ್ಲಿ ಅನಧೀಕೃತವಾಗಿ ವಿದ್ಯುತ್ ಸಂಪರ್ಕ ಪಡೆಯುತ್ತಿರುವವರನ್ನು ಗುರುತಿಸಿ ವಿದ್ಯುತ್ ಮೀಟರ್ ಸಂಪರ್ಕ ಪಡೆಯಲು ತಿಳಿಸಬೇಕು. ಬಾಡಿಗೆ ಮನೆ ಬದಲಾಯಿಸುವವರ ಯೋಜನೆ ಪಡೆಯಲು ಲಿಂಕಿಂಗ್ ಮತ್ತು ಡಿ-ಲಿಂಕಿಂಗ್ ಮಾಹಿತಿಯು ಸಹ ಪೂರಕವಾಗಿರಬೇಕು ಎಂದು ಜೆಸ್ಕಾಂ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಿಲ್ಲೆಯಲ್ಲಿ ಶಕ್ತಿ ಯೋಜನೆಯಡಿ ಬಳ್ಳಾರಿ ವಿಭಾಗದ ಸಾರಿಗೆ ಇಲಾಖೆಯ ಬಸ್‌ಗಳಲ್ಲಿ ಜೂನ್-2023 ರಿಂದ ಮಾರ್ಚ್-2025 ರವರೆಗೆ ಮಹಿಳಾ ವಯಸ್ಕರು ಮತ್ತು ಹೆಣ್ಣು ಮಕ್ಕಳು ಸೇರಿ ಒಟ್ಟು 4,52,37,755 ಮಹಿಳೆಯರು ಉಚಿತವಾಗಿ ಪ್ರಯಾಣಿಸಿದ್ದು, 167,99,61,992 ರೂ. ಗಳು ಸಾರಿಗೆ ಆದಾಯ ಹೊಂದಲಾಗಿದೆ ಎಂದು ಕ.ಕ.ಸಾರಿಗೆ ಸಂಸ್ಥೆಯ ಬಳ್ಳಾರಿ ವಿಭಾಗೀಯ ನಿಯಂತ್ರಣಾಧಿಕಾರಿಗಳು ತಿಳಿಸಿದರು.

ಯುವ ನಿಧಿ ಯೋಜನೆಯಡಿ ಫೆಬ್ರವರಿ-2025 ಮಾಹೆವರೆಗೆ ಜಿಲ್ಲೆಯ 7,618 ನಿರುದ್ಯೋಗಿ ಅಭ್ಯರ್ಥಿಗಳು ನೋಂದಾಯಿಸಿದ್ದು, ಈವರೆಗೆ 9,79,38,000 ರೂ. ಫಲಾನುಭವಿಗಳಿಗೆ ಜಮೆ ಮಾಡಲಾಗಿದೆ ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಅಧಿಕಾರಿಗಳು ಸಭೆಗೆ ತಿಳಿಸಿದರು.

ಇದಕ್ಕೆ ಜಿಪಂ ಸಿಇಒ ಮಹಮ್ಮದ್ ಹ್ಯಾರೀಸ್ ಸುಮೈರ್ ಅವರು ಮಾತನಾಡಿ, ನಿರುದ್ಯೋಗಿ ಅರ್ಹ ಫಲಾನುಭವಿಗಳು ಅರ್ಜಿ ಸಲ್ಲಿಸಿದಲ್ಲಿ ಅವುಗಳನ್ನು ಸಕಾಲದಲ್ಲಿ ವಿಲೇವಾರಿ ಮಾಡಬೇಕು. ಕಾಲೇಜು ಮಟ್ಟದಲ್ಲಿ ವಿಶೇಷ ನೋಂದಣಿ ಶಿಬಿರ ಆಯೋಜಿಸಬೇಕು. ಹೆಚ್ಚು ಅರ್ಹ ನಿರುದ್ಯೋಗ ಅಭ್ಯರ್ಥಿಗಳು ನೋಂದಾಯಿಸಿಕೊಳ್ಳುವಂತೆ ಜಾಗೃತಿ ಮತ್ತು ಅರಿವು ಮೂಡಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಅಧ್ಯಕ್ಷರು ಮಾತನಾಡಿ, ಅಧಿಕಾರಿಗಳು ತಮ್ಮ ಸೇವಾ ಮನೋಭಾವದಿಂದ ಕೆಲಸ ನಿರ್ವಹಿಸಬೇಕು. ಸರ್ಕಾರ ಯೋಜನೆಗಳನ್ನು ಜನ ಸಾಮಾನ್ಯರಿಗೆ ಅರ್ಹ ಫಲಾನುಭವಿಗಳನ್ನು ಗುರುತಿಸಿ ಸಕಾಲದಲ್ಲಿ ಅವರಿಗೆ ಸೇವೆ ಒದಗಿಸಿದಾಗ ಮಾತ್ರ ಯೋಜನೆಗಳಿಗೆ ಸಾರ್ಥಕತೆ ದೊರಕುತ್ತದೆ. ಇದರಿಂದ ಸಾರ್ವಜನಿಕ ವಲಯದಲ್ಲಿ ಸರ್ಕಾರದ ಮೇಲೆ ಉತ್ತಮ ಅಭಿಪ್ರಾಯ ಮೂಡುತ್ತದೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಆಶಾ ಲತಾ ಸೋಮಪ್ಪ, ಬಳ್ಳಾರಿ ತಾಲ್ಲೂಕು ಅಧ್ಯಕ್ಷ ಗೋನಾಳ್ ನಾಗಭೂಷಣ ಗೌಡ, ಕುರುಗೋಡು ತಾಲ್ಲೂಕು ಅಧ್ಯಕ್ಷ ನಾಗೇನಹಳ್ಳಿ ಮಲ್ಲಿಕಾರ್ಜುನ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕರಾದ ಸಕೀನಾ, ಬಳ್ಳಾರಿ ಗ್ರಾಮೀಣ ಜೆಸ್ಕಾಂನ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ರಂಗನಾಥಬಾಬು, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬಳ್ಳಾರಿ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಇನಾಯತ್ ಬಾಗ್‌ಬಾನ್, ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಅಧಿಕಾರಿಗಳು ಸೇರಿದಂತೆ ಐದು ತಾಲ್ಲೂಕುಗಳ ತಾಪಂ ಇಒ ಗಳು ಹಾಗೂ ಇತರರು ಉಪಸ್ಥಿತರಿದ್ದರು.

---

ಮೈಕ್ರೋ ನ್ಯೂಸ್

## ಶ್ರೀ ಬಸವ ಜಯಂತಿ: ಏ. 19 ಪೂರ್ವಭಾವಿ ಸಭೆ

ಹಂಪಿ ಟೈಮ್ಸ್ ಕೊಪ್ಪಳ

ಜಿಲ್ಲಾ ಕೇಂದ್ರದಲ್ಲಿ ಏಪ್ರಿಲ್ 30 ರಂದು ಶ್ರೀ ಬಸವ ಜಯಂತಿ ಆಚರಣೆ ಪ್ರಯುಕ್ತ ಪೂರ್ವಭಾವಿ ಸಭೆಯನ್ನು ಏ. 19 ರಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಸಭೆಯ ಅಧ್ಯಕ್ಷತೆಯನ್ನು ಅಪರ ಜಿಲ್ಲಾಧಿಕಾರಿ ಸಿದ್ದರಾಮೇಶ್ವರ ಅವರು ವಹಿಸಿಕೊಳ್ಳಲಿದ್ದು, ಸಭೆಗೆ ಸಂಬಂಧಿಸಿದ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಗೆ ತಪ್ಪದೇ ಹಾಜರಾಗಬೇಕು ಹಾಗೂ ಸಮಾಜದ ಮುಖಂಡರು ಈ ಸಭೆಗೆ ಆಗಮಿಸಿ ಅಗತ್ಯ ಸಲಹೆಗಳನ್ನು ನೀಡುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ ಮರಬನಳ್ಳಿ ಅವರು ತಿಳಿಸಿದ್ದಾರೆ.

## ಮೌಲಾನಾ ಆಜಾದ್ ಶಾಲೆಗಳ 6ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ಹಂಪಿ ಟೈಮ್ಸ್ ರಾಯಚೂರು

ಇಲ್ಲಿನ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ 2025-26ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೌಲಾನಾ ಆಜಾದ್ ಮಾದರಿ ಶಾಲೆಗಳಲ್ಲಿ 6ನೇ ತರಗತಿಗೆ ಪ್ರವೇಶಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.


ರಾಯಚೂರಿನ ಅಲ್ಪಸಂಖ್ಯಾತರ ಮೌಲಾನಾ ಆಜಾದ್ ಮಾದರಿ ಶಾಲೆಗಳು, ಆಶ್ರಯ ಕಾಲೋನಿ, ಹಾಷ್ಮಿಯ ಆವರಣ, ಬೆರೋನ್ ಕಿಲ್ಲಾ-3, ಬೆರೋನ್ ಕಿಲ್ಲಾ-4, ದೇವದುರ್ಗ ತಾಲ್ಲೂಕಿನ ಗೌರಂಪೇಟೆ, ಜಾಲಹಳ್ಳಿ ಮತು ಗಬ್ಬೂರು, ಅರಕೇರಾ ತಾಲ್ಲೂಕಿನ ಅರಕೇರಾ, ಮಾನವಿ ತಾಲ್ಲೂಕಿನ ಮಾನವಿ, ಲಿಂಗಸೂಗೂರು ತಾಲ್ಲೂಕಿನ ಲಿಂಗಸೂಗೂರು, ಮಸ್ಕಿ ತಾಲ್ಲೂಕಿನ ಮಸ್ಕಿ, ಸಿರವಾರ ತಾಲ್ಲೂಕಿನ ಸಿರವಾರ ಮತ್ತು ಸಿಂಧನೂರು ತಾಲ್ಲೂಕಿನ ಸಿಂಧನೂರು, ಪಿಡಬ್ಲ್ಯೂಡಿಕ್ಯಾಂಪ್, ದಿದ್ದಿಗಿ, ಸಿಂಗಾಪೂರು ಮತ್ತು ಸಾಲಗುಂದ ಶಾಲೆಗೆ 6ನೇ ತರಗತಿಯಿಂದ 10ನೇ ತರಗತಿಯವರೆಗೆ ಆಂಗ್ಲ ಮಾಧ್ಯಮದಲ್ಲಿ ವ್ಯಾಸಂಗ ಮಾಡಲು ಅಲ್ಪಸಂಖ್ಯಾತರ ಸಮುದಾಯಕ್ಕೆ ಶೇ.75 ರಷ್ಟು ಸ್ಥಾನಗಳನ್ನು ಮತ್ತು ಶೇ.25 ರಷ್ಟು ಸ್ಥಾನಗಳನ್ನು ಇತರೆ ವರ್ಗದವರಿಗೆ ಮೀಸಲಿಡಲಾಗಿದ್ದು, ಪ್ರಸ್ತುತ ಕರ್ನಾಟಕದ ಸರ್ಕಾರದ ಅಥವಾ ಅಂಗೀಕೃತ ಶಾಲೆಗಳಲ್ಲಿ 5ನೇ ತರಗತಿಯಲ್ಲಿ ಉತ್ತೀರ್ಣರಾದ ಅರ್ಹ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬುದ್ದಿಸ್ಟ್, ಸಿಖ್ ಮತ್ತು ಪಾರ್ಸಿ ವಿದ್ಯಾರ್ಥಿಗಳು ಮತ್ತು ಪ್ರ.ಜಾತಿ/ಪ.ಪಂಗಡ ಹಾಗೂ ಇತರೆ ಹಿಂದುಳಿದ ವರ್ಗಗಳ ಅರ್ಹ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಮೇ.10ರೊಳಗಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ಇಲಾಖೆ ಸಂಪರ್ಕಿಸಿ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ತಿಳಿಸಿದ್ದಾರೆ.

## ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ವಿಶ್ವಾವಸು

17-04-2025 - ಗುರುವಾರ

| | |
|---|---|
| ತಿಥಿ | : ಚತುರ್ಥಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಜ್ಯೇಷ್ಠ |
| ಯೋಗ | : ವರಿಯಾಣ |
| ಕರಣ | : ಬಾಳವ |
| ಸೂರ್ಯೋದಯ | : 06:05:48 |
| ಸೂರ್ಯಾಸ್ತ | : 18:47:23 |
| ರಾಹು ಕಾಲ | : 14:02-15:37 |
| ಯಮಘಂಡ ಕಾಲ | : 06:06-07:41 |
| ಗುಳಿಕ ಕಾಲ | : 09:16-10:51 |



## ತುಂಗಭದ್ರಾ ನೀರಿನ ಮಟ್ಟ

ಬುಧವಾರ : 16-04-2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1584.61 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 324 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 7.075 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1578.83 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 162 ಕ್ಯುಸೆಕ್ |
| ಸಾಮರ್ಥ್ಯ | 3.929 ಟಿಎಂಸಿ |

## ಏ.28 ರಂದು ಬಳ್ಳಾರಿಯಲ್ಲಿ ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮ

■ ಹಂಪಿ ಟೈಮ್ಸ್ ಬಳ್ಳಾರಿ

ಕಾರ್ಮಿಕರ ಭವಿಷ್ಯ ಸಂಸ್ಥೆ ಬಳ್ಳಾರಿ ಪ್ರಾದೇಶಿಕ ಕಚೇರಿ ವತಿಯಿಂದ ಭವಿಷ್ಯ ನಿಧಿ ನಿಮ್ಮ ಹತ್ತಿರಕ್ಕೆ ಎಂಬ ಅಂಶದಡಿ ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮವನ್ನು ಏ.28 ರಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಬಳ್ಳಾರಿಯ ವೇಣಿವೀರಾಪುರ ರಾಯಲ್ ಸ್ಟೀಲ್ಸ್ ಕಾರ್ಖಾನೆಯಲ್ಲಿ ಆಯೋಜಿಸಲಾಗಿದೆ ಎಂದು ಪ್ರಾದೇಶಿಕ ಭವಿಷ್ಯ ನಿಧಿಯ ಬಳ್ಳಾರಿ ಪ್ರಾದೇಶಿಕ ಕಚೇರಿಯ ಆಯುಕ್ತ ಕೆ.ವಿ.ಪ್ರವೀಣ್ ಅವರು ತಿಳಿಸಿದ್ದಾರೆ.

ಈ ಕಾರ್ಯಕ್ರಮದಲ್ಲಿ ಕಾರ್ಮಿಕರ, ಪಿಂಚಣಿದಾರರ ಮತ್ತು ಉದ್ಯೋಗದಾತರರ ಕುಂದು ಕೊರತೆ ಪರಿಹಾರ, ಮಾಹಿತಿ ವಿನಿಮಯ ಮಾಡಿಕೊಳ್ಳಬಹುದು.

ಉದ್ಯೋಗದಾತರ ಕರ್ತವ್ಯ ಮತ್ತು ಜವಾಬ್ದಾರಿಗಳ ಕುರಿತು ಅರಿವು, ಕಾರ್ಮಿಕರಿಗೆ, ಉದ್ಯೋಗದಾತರಿಗೆ, ಪ್ರಧಾನ ಉದ್ಯೋಗದಾತರಿಗೆ ಮತ್ತು ಗುತ್ತಿಗೆದಾರರಿಗೆ ಲಭ್ಯವಿರುವ ಆನ್‌ಲೈನ್ ಸೇವೆಗಳ ಮಾಹಿತಿ, ಹೊಸ ಉಪಕ್ರಮಗಳು ಹಾಗೂ ಸುಧಾರಣೆ ಕ್ರಮಗಳ ಕುರಿತು ಮಾಹಿತಿ ಒದಗಿಸುವ ಕಾರ್ಯಕ್ರಮವಾಗಿದೆ.

ಕಾರ್ಮಿಕರು, ಪಿಂಚಣಿದಾರರು, ಉದ್ಯೋಗದಾತರು ಏ.28 ರಂದು ನಡೆಯುವ ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಇಂದು ಕೊಪ್ಪಳದಲ್ಲಿ ಉಪನ್ಯಾಸ, ಜಾನಪದ ಗಾಯನ ಕಾರ್ಯಕ್ರಮ

■ ಹಂಪಿ ಟೈಮ್ಸ್ ಕೊಪ್ಪಳ

ಕರ್ನಾಟಕ ಜಾನಪದ ಅಕಾಡೆಮಿಯ, ಬೆಂಗಳೂರು ವತಿಯಿಂದ ಗಿಡ-ಗಿಡಕ ಕೂತು ಕೈಮಾಡಿ ಕರೀತಾವ... ಉಪನ್ಯಾಸ ಹಾಗೂ ಜಾನಪದ ಗಾಯನ ಕಾರ್ಯಕ್ರಮವನ್ನು ಏಪ್ರಿಲ್ 17 ರಂದು ಬೆಳಿಗ್ಗೆ 10 ಗಂಟೆಗೆ ನಗರದ ಶ್ರೀ ಗವಿಸಿದ್ಧೇಶ್ವರ ಬಿ.ಇಡಿ ಮಹಾವಿದ್ಯಾಲಯದಲ್ಲಿ ಆಯೋಜಿಸಲಾಗಿದೆ.

ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರಾದ ಗೊಲ್ಲಹಳ್ಳಿ ಶಿವಪ್ರಸಾದ್ ಅವರು ಕಾರ್ಯಕ್ರಮ ಉದ್ಘಾಟಿಸುವರು. ಶ್ರೀ ಗವಿಸಿದ್ಧೇಶ್ವರ ಬಿ.ಇಡಿ ಮಹಾವಿದ್ಯಾಲಯದ ಪ್ರಾಚಾರ್ಯರು ಡಾ. ಎಸ್.ಬಿ. ಕಂಬಾರ ಅವರು ಅಧ್ಯಕ್ಷತೆ ವಹಿಸುವರು. ಸಾಹಿತಿ ಡಾ. ಸಿದ್ದಲಿಂಗಪ್ಪ ಕೊಟ್ಟೆಕಲ್ ಅವರು "ಕೊಪ್ಪಳ ಪರಿಸರದ ಜನಪದ ಭಾಷಾ ವೈಶಿಷ್ಟತೆ" ವಿಷಯದ ಕುರಿತು ಉಪನ್ಯಾಸ ನೀಡುವರು. ಕರ್ನಾಟಕ ಜಾನಪದ ಅಕಾಡೆಮಿಯ ಸದಸ್ಯರಾದ ಡಾ. ಜೀವನಸಾಬ್ ವಾಲಿಕಾರ್ ಬಿನ್ನಾಳ ಅವರು ಪ್ರಾಸ್ತಾವಿಕ ನುಡಿಗಳನ್ನಾಡುರು.

ಕಾರ್ಯಕ್ರಮದಲ್ಲಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಭೀಮವ್ವ ಶಿಳ್ಳೆಕ್ಯಾತರ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಪ್ರೊ. ಅಲ್ಲಮಪ್ರಭು ಬೆಟ್ಟದೂರು ಮತ್ತು ಎ.ಎಮ್.ಮದರಿ ಅವರಿಗೆ ಗೌರವ ಸನ್ಮಾನ ನೀಡಲಾಗುವುದು. ಮುಖ್ಯ ಅತಿಥಿಗಳಾಗಿ ಬಳ್ಳಾರಿ ಜಿಲ್ಲೆಯ ಜಾನಪದ ಮಹಾಕಾವ್ಯ ಗಾಯನ ಕಲಾವಿದರಾದ ದಳವಾಯಿ ಚಿತ್ತಪ್ಪ, ಕೊಪ್ಪಳ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ್ ಮರಬನಹಳ್ಳಿ, ಕರ್ನಾಟಕ ಜಾನಪದ ಅಕಾಡೆಮಿಯ ಸದಸ್ಯರಾದ ಮೆಹಬೂಬ ಕಿಲ್ಲೆದಾರ ಪಾಲ್ಗೊಳ್ಳುವರು.

ಕಾರ್ಯಕ್ರಮದಲ್ಲಿ ಹಾಡು ಹಕ್ಕಿ ಬಳಗದ ಶರಣಪ್ಪ ವಡಿಗೇರಿ, ಮಾರೆಪ್ಪ ಮಾರೆಪ್ಪ ದಾಸರ, ವಾಲ್ಮೀಕೆಪ್ಪ ಯಾಕ್ಷರನಾಳ, ಜಗದಯ್ಯ ಸಾಲಿಮಠ, ದುರ್ಗೇಶ ಹಿರೇಮನಿ, ಮರಿಯಪ್ಪ ಜಿ.ಹೆಚ್., ಸಿದ್ದಲಿಂಗವ್ವ ಪೂಜಾರ್, ಸಾಹಿತ್ಯ ಎಂ.ಜೆ., ಅಲ್ಲಾಭಕ್ಷಿ ವಾಲಿಕಾರ, ಬಸವಂತೆಮ್ಮ ಮಾಲಿ ಪಾಟೀಲ್, ಲಲಿತಾ ಹಿರೇಮಠ ಹಾಗೂ ಮಹೇಶಪ್ಪ ಕಂಬಳಿ, ವಾದ್ಯ ವೃಂದದ ಮಾರುತಿ ದೊಡ್ಡಮನಿ, ರಾಮಚಂದ್ರಪ್ಪ ಉಪ್ಪಾರ್ ಮತ್ತು ಸಂಜನ್ ಬೆಲ್ಲದ್ ಉಪಸ್ಥಿತರಿರುವರು ಎಂದು ಕರ್ನಾಟಕ ಜಾನಪದ ಅಕಾಡೆಮಿಯ ರಿಜಿಸ್ಟ್ರಾರ್ ಎನ್.ನಮ್ರತ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


# ನನ್ನ ಗುರಿ



ವಿದ್ಯಾರ್ಥಿಗಳಿಗಾಗಿ ಲೇಖನ ಸ್ಪರ್ಧೆ

(ಪ್ರೌಢಶಾಲಾ ಹಾಗೂ ಕಾಲೇಜ್ ವಿದ್ಯಾರ್ಥಿಗಳಿಗಾಗಿ)

ನಿಮ್ಮ ಪ್ರತಿಭೆ ಹೊರಹಾಕಲು ನಿಮಗೊಂದು ಸುವರ್ಣಾವಕಾಶ !

ಪ್ರಿಯ ವಿದ್ಯಾರ್ಥಿಗಳೆ,



ನಮಗೆ ಪ್ರತಿಯೊಬ್ಬರಿಗೂ ಗುರಿ ಜೊತೆ ಕನಸುಗಳಿರುತ್ತವೆ! ನೀವೂ ಭವಿಷ್ಯದಲ್ಲಿ ಏನಾದರೂ ಆಗಬೇಕೆಂದುಕೊಳ್ಳುತ್ತೀರಿ, ಅಲ್ಲವೆ? ವೈದ್ಯ, ವಿಜ್ಞಾನಿ,ಇಂಜಿನಿಯರ್, ಕ್ರೀಡಾಪಟು, ಕಲಾವಿದ, ಶಿಕ್ಷಕ, ಅಥವಾ ಇತರ ಹೊಸ ಕ್ಷೇತ್ರಗಳಲ್ಲಿ ನಿಮ್ಮ ಹೆಜ್ಜೆ ಗುರುತನ್ನು ಮೂಡಿಸಲು ನೀವು ಬಯಸಬಹುದು. ಈ ಕನಸುಗಳನ್ನು ಬರಹ ರೂಪದಲ್ಲಿ ಹಂಚಿಕೊಳ್ಳಲು ನಿಮಗೆ ಒಂದು ಅವಕಾಶ!

ಹಂಪಿ ಟೈಮ್ಸ್ ಈಗಾಗಲೇ ಸ್ಟುಡೆಂಟ್ ಕಾಲಂ ಮೂಲಕ ಮಕ್ಕಳಲ್ಲಿ ಕತೆ ಬರೆಯುವ ಕೌಶಲ್ಯ ಮೂಡಿಸುತ್ತಿದೆ. ಬೇಸಿಗೆ ರಜೆಯ ನಿಮಿತ್ತ "ನನ್ನ ಗುರಿ" ಶೀರ್ಷಿಕೆಯಡಿ ಲೇಖನ ಸ್ಪರ್ಧೆಯಲ್ಲಿ ಪಾಲ್ಗೊಳ್ಳಿ!



200 ಪದಗಳಿಗೆ ಮೀರದಂತೆ ಲೇಖನ ಬರೆಯಿರಿ.

ನಿಮ್ಮ ಗುರಿ/ಕನಸು ಏನು? ಅದನ್ನು ಸಾಧಿಸಲು ನೀವು ಏನನ್ನು ಮಾಡಲಿದ್ದೀರಿ? ನಿಮ್ಮ ಆಯ್ಕೆಗೆ ಪ್ರೇರಣೆಯಾರು? ಮತ್ತು ನೀವು ಅಂದುಕೊಂಡ ಗುರಿ ಸಾಧಿಸಲು ನೀವು ತೆಗೆದುಕೊಳ್ಳಬಹುದಾದ ಅವಧಿಯನ್ನೂ ನಮೂದಿಸಿ ನಿಮ್ಮ ಭಾವಚಿತ್ರ, ಸಂಪರ್ಕ ನಂಬರಿನೊಂದಿಗೆ ಬರೆದು ಕಳಿಸಿರಿ.

**ಆಯ್ದ ಲೇಖನಗಳನ್ನು "ಹಂಪಿ ಟೈಮ್ಸ್" ನಲ್ಲಿ ಪ್ರಕಟಿಸಲಾಗುವುದು!**


ನಿಮ್ಮ ಲೇಖನಗಳನ್ನು ನುಡಿ/ಯುನಿಕೋಡ್‌ನಲ್ಲಿ ಟೈಪ್ ಮಾಡಿ, ಇ-ಮೇಲ್: **hampitimes@gmail.com** ಗೆ ಕಳಿಹಿಸಿ.

**ನಿಮ್ಮ ಕನಸುಗಳನ್ನು ಹಂಚಿಕೊಳ್ಳಲು ತಯಾರಾಗಿದ್ದೀರಾ? ಬರೆಯಲು ಶುರುಮಾಡಿ!**

94486 33038 www.hampitimes.com / epaper.hampitimes.com hampitimes@gmail.com




## ಆನಂದ ಬಾಣ







# ಬೆಳೆ ವಿಮೆ ಯೋಜನೆ ಸಾಧನೆ ಕೊಪ್ಪಳಕ್ಕೆ ರಾಷ್ಟ್ರ ಮಟ್ಟದ ಪ್ರಶಸ್ತಿ

**ಹಂಪಿ ಟೈಮ್ಸ್ ಕೊಪ್ಪಳ**
2023-24ನೇ ಸಾಲಿನ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯಡಿ ಕೊಪ್ಪಳ ಜಿಲ್ಲೆಗೆ ರಾಷ್ಟ್ರ ಮಟ್ಟದ ಪ್ರಶಸ್ತಿ ಕೊಪ್ಪಳ ಜಂಟಿ ಕೃಷಿ ನಿರ್ದೇಶಕ ಟಿ.ಎಸ್.ರುದ್ರೇಶಪ್ಪ ಅವರು ತಿಳಿಸಿದ್ದಾರೆ.

2023-24ನೇ ಸಾಲಿನ ಮುಂಗಾರು & ಹಿಂಗಾರು ಹಂಗಾಮಿನಲ್ಲಿ ಕೊಪ್ಪಳ ಜಿಲ್ಲಾಧಿಕಾರಿಗಳ ನಿರಂತರ ಮೇಲ್ವಿಚಾರಣೆ, ವಿಮರ್ಶೆ ಹಾಗೂ ಮಾರ್ಗದರ್ಶನದ ಫಲಿತಾಂಶ ವಾಗಿ ವಿವಿಧ ವಿಷಯಗಳಿಗೆಸಂಬಂಧಿಸಿದಂತೆ, ಕೊಪ್ಪಳ ಜಿಲ್ಲಾಡಳಿತ ಹಾಗೂ ಕೃಷಿ ಇಲಾಖೆ ಉತ್ತಮ ಸಾಧನೆ ಮಾಡಿರುವ ಕಾರಣ ರಾಷ್ಟ್ರ ಮಟ್ಟದಲ್ಲಿ ಕೊಪ್ಪಳ ಜಿಲ್ಲೆಗೆ ಪ್ರಶಸ್ಥಿಯನ್ನು ನೀಡಲಾಗಿದೆ.

2023-24ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಒಟ್ಟು 74,781 ರೈತರನ್ನು ಬೆಳೆವಿಮೆ ನೋಂದಾವಣೆ ಮಾಡಲಾಗಿರುತ್ತದೆ. ಆದರೆ ಮುಂಗಾರು ಹಂಗಾಮಿನಲ್ಲಿ ಮಳೆ ಆಗದೇ ಕಾರಣ ಬರಗಾಲ ಎಂದು ಘೋಷಣೆ ಮಾಡಲಾಗಿತ್ತು. ಇಂತಹ ಸಂದರ್ಭದಲ್ಲಿ ಜಿಲ್ಲಾಡಳಿತ ಮತ್ತು ಕೃಷಿ ಇಲಾಖೆ ಸಮೀಕ್ಷೆಯನ್ನು ನಡೆಸಿ ಬೆಳೆವಿಮೆ ಯೋಜನೆಯಡಿ ಒಟ್ಟು 33,375 ರೈತರಿಗೆ 26.17 ಕೋಟಿ ಮಧ್ಯತರ ಪರಿಹಾರ ಹಾಗೂ ಬೆಳೆ ಕಟಾವು ಆಧಾರದ ಮೇಲೆ 37,730 ರೈತರಿಗೆ ರೂ 51.88 ಕೋಟಿ ಒಟ್ಟಾರೆ 71,105 ರೈತರಿಗೆ 78.55 ಕೋಟಿ ರೂ ಬೆಳೆವಿಮೆ ಪರಿಹಾರ ರೈತರ ಖಾತೆಗೆ ಜಮಾ ಆಗಿರುತ್ತದೆ. ಇದೇ ರೀತಿ ಹಿಂಗಾರು ಹಂಗಾಮಿನಲ್ಲಿಯೂ ಸಹ 5311 ರೈತರಿಗೆ ರೂ. 6.74 ಕೋಟಿ ಬೆಳೆವಿಮೆ ಪರಿಹಾರ ರೈತರ ಖಾತೆಗೆ ಜಮಾ ಆಗಿರುತ್ತದೆ.

ಭತ್ತದ ಕೃಷಿಯಲ್ಲಿ ಯಸ್-ಟೆಕ್ ಪದ್ಧತಿ: ಪ್ರಥಮ ಬಾರಿಗೆ 2023-24 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಭತ್ತ ನೀರಾವರಿ ಬೆಳೆಗೆ ಸಂಬಂಧಿಸಿದಂತೆ, ಯಸ್-ಟೆಕ್ (ಜಝ-ಖಿಜಛಿ) ಪದ್ಧತಿಯನ್ನು ಅಳವಡಿಸಿ ಭತ್ತದ ಬೆಳೆಯಲ್ಲಿ ನಿಖರ ಇಳುವರಿಯನ್ನು ಪಡೆದು ಬೆಳೆ ಹಾನಿಯನ್ನು ಲೆಕ್ಕ ಹಾಕಿ ಒಟ್ಟು 3323 ರೈತರಿಗೆ ರೂ 2.39 ಕೋಟಿ ಭತ್ತ ನೋಂದಾಯಿಸಿದ ರೈತರಿಗೆ ಬೆಳೆವಿಮೆ ಪರಿಹಾರ ಒದಗಿಸಲಾಗಿದೆ.

ಬೆಳೆವಿಮೆ ನೊಂದಾವಣೆ ಪ್ರಚಾರದ ನವೀನ ವಿಧಾನಗಳು: ದಿನ ಪತ್ರಿಕೆಗಳು, ರೆಡಿಯೋ ಕಾರ್ಯ ಕ್ರಮಗಳು, ಫೋನ್ ಇನ್ ಕಾರ್ಯಕ್ರಮ, ಕೃಷಿಸಖಿ ಮತ್ತು ಪಶುಸಖಿ ಮೂಲಕ ಹಳ್ಳಿಯ ಮಟ್ಟಕ್ಕೆ ಮಾಹಿತಿ ತಲುಪಿಸುವ ಕ್ರಾಂತಿ ಕೃಷಿ ಇಲಾಖೆಯ ಸಿಬ್ಬಂದಿಯೊಂದಿಗೆ ರೈತರಿಗೆ ಬೆಳೆವಿಮೆ ಮಾಹಿತಿಯನ್ನು ನೀಡಿ ಅನುಕೂಲ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

# ಟಿಬಿಡ್ಯಾಂ ಬಳಿ ಗುಡ್ಡಕ್ಕೆ ಬೆಂಕಿ



**ಹಂಪಿ ಟೈಮ್ಸ್ ಹೊಸಪೇಟೆ**
ನಗರದ ಹೊರವಲಯದ ರಾಷ್ಟ್ರೀಯ ಹೆದ್ದಾರಿ 50 ರ ಪಕ್ಕದ ಟಿಬಿ ಡ್ಯಾಂನ ಬಳಿಯ ಗುಡ್ಡದಲ್ಲಿ ಬುಧವಾರ ಬೆಂಕಿ ಕಾಣಿಸಿಕೊಂಡು ಗಿಡಮರಳು ಧಗಧಗನೆ ಉರಿದು ಬೆಂಕಿಗಾಹುತಿಯಾಗಿವೆ. ಕಿಡಿಗೇಡಿಗಳು ಬೆಂಕಿ ಹಚ್ಚಿರಬಹುದು ಅಥವಾ ಬಿಡಿ, ಸಿಗರೇಟ್ ಕಿಡಿ ಬಿದ್ದಿರಬಹುದೆಂಬ ಶಂಕೆ ವ್ಯಕ್ತಪಡಿಸಲಾಗುತ್ತಿದೆ. ತನಿಖೆ ನಂತರ ಕಾರಣ ತಿಳಿಯಲಿದೆ. ಅಗ್ನಿಶಾಮಕದಳದ ಸಿಬ್ಬಂದಿ ಬೆಂಕಿ ನಂದಿಸಿ, ಹೆಚ್ಚಿನ ಅನಾಹುತವನ್ನು ತಪ್ಪಿಸಿದರು.

# ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಭತ್ತ ಬಿಳಿಜೋಳ ಖರೀದಿ ಕೇಂದ್ರಗಳ ಪ್ರಾರಂಭ

**ಹಂಪಿ ಟೈಮ್ಸ್ ಕೊಪ್ಪಳ**
2024-25ನೇ ಸಾಲಿನ ಹಿಂಗಾರು ಹಂಗಾಮಿನ ಋತುವಿನಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಭತ್ತ ಮತ್ತು ಬಿಳಿಜೋಳ ಖರೀದಿ ಕೇಂದ್ರಗಳನ್ನು ಕೊಪ್ಪಳ ಜಿಲ್ಲೆಯಲ್ಲಿ ಪ್ರಾರಂಭಿಸಲಾಗಿದೆ.

ಪ್ರತಿ ಕ್ವಿಂಟಲ್‌ಗೆ ಸಾಮಾನ್ಯ ಭತ್ತಕ್ಕೆ ರೂ. 2,300 ಗಳು, ಗ್ರೇಡ್ 'ಎ' ಭತ್ತಕ್ಕೆ ರೂ. 2,320 ಹಾಗೂ ಹೈಬ್ರಿಡ್ ಬಿಳಿಜೋಳಕ್ಕೆ ರೂ. 3,371 ಮತ್ತು ಮಾಲ್ದಂಡಿ ಬಿಳಿಜೋಳಕ್ಕೆ ರೂ. 3,421 ರಂತೆ ದರ ನಿಗದಿಪಡಿಸಲಾಗಿದ್ದು, ಭತ್ತ ಖರೀದಿಗೆ ಮಾರ್ಚ್ 20 ರಿಂದ ಏಪ್ರಿಲ್ 25ರ ವರೆಗೆ ಹಾಗೂ ಬಿಳಿಜೋಳ ಖರೀದಿಗೆ ಮಾ. 25 ರಿಂದ ಮೇ. 31ರ ವರೆಗೆ ರೈತರ ನೋಂದಣಿ ಕಾರ್ಯವು ಇರುತ್ತದೆ. ಪ್ರತಿ ಎಕರೆಗೆ 25 ಕ್ವಿಂಟಲ್ ನಂತೆ ಪ್ರತಿ ರೈತರಿಂದ ಗರಿಷ್ಠ 50 ಕ್ವಿಂಟಲ್ ಭತ್ತ ಖರೀದಿಸಲಾಗುವುದು. ಬಿಳಿಜೋಳವನ್ನು ಪ್ರತಿ ರೈತರಿಂದ ಎಕರೆಗೆ 20 ಕ್ವಿಂಟಲ್ ನಂತೆ ಗರಿಷ್ಠ 150 ಕ್ವಿಂಟಲ್ ಖರೀದಿಸಲಾಗುವುದು.

ನೋಂದಣಿ/ ಖರೀದಿ ಕೇಂದ್ರಗಳ ಹಾಗೂ ಅಧಿಕಾರಿಗಳ ವಿವರ: ಕೊಪ್ಪಳ ಭತ್ತ ಮತ್ತು ಜೋಳ ಖರೀದಿ ಕೇಂದ್ರದ ಖರೀದಿ ಅಧಿಕಾರಿ ಎಂ.ಎ.ಕೋನಾಪೂರ ಮೊ.ಸಂ: 9739228720 ಹಾಗೂ ಉಸ್ತುವಾರಿ ಅಧಿಕಾರಿ ಅಬ್ಬಾಸ್ ಅಲಿ ಮೊ.ಸಂ: 9482238556, ಗಂಗಾವತಿ ಭತ್ತ ಖರೀದಿ ಕೇಂದ್ರದ ಖರೀದಿ ಅಧಿಕಾರಿ ಸೋಮಶೇಖರ ಮೊ.ಸಂ: 6361289585 ಮತ್ತು ಉಸ್ತುವಾರಿ ಅಧಿಕಾರಿ ಸುಹಾಸ ಮೊ.ಸಂ: 9886320360, ಕುಷ್ಟಗಿ ಜೋಳ ಖರೀದಿ ಕೇಂದ್ರದ ಖರೀದಿ ಅಧಿಕಾರಿ ಸೋಮಶೇಖರ ಮೊ.ಸಂ: 6361289585 ಹಾಗೂ ಉಸ್ತುವಾರಿ ಅಧಿಕಾರಿ ಚನ್ನಬಸಪ್ಪ, ಮೊ.ಸಂ: 9449464125, ಯಲಬುರ್ಗಾ ಜೋಳ ಖರೀದಿ ಕೇಂದ್ರದ ಖರೀದಿ ಅಧಿಕಾರಿ ಎಂ.ಎ.ಕೋನಾಪೂರ ಮೊ.ಸಂ: 9739228720 ಮತ್ತು ಉಸ್ತುವಾರಿ ಅಧಿಕಾರಿ ಮಲ್ಲಿಕಾರ್ಜುನ ಮೊ.ಸಂ: 9844960399, ಕಾರಟಗಿ ಭತ್ತ ಖರೀದಿ ಕೇಂದ್ರದ ಖರೀದಿ ಅಧಿಕಾರಿ ಸೋಮಶೇಖರ ಮೊ.ಸಂ: 6361289585 ಹಾಗೂ ಉಸ್ತುವಾರಿ ಅಧಿಕಾರಿ ನವೀನ್‌ಮಠದ್ ಮೊ.ಸಂ: 8123453419, ಕನಕಗಿರಿ ಜೋಳ ಖರೀದಿ ಕೇಂದ್ರದ ಸೋಮಶೇಖರ ಮೊ.ಸಂ: 6361289585 ಮತ್ತು ಉಸ್ತುವಾರಿ ಅಧಿಕಾರಿ ಚನ್ನಬಸಪ್ಪ ಮೊ.ಸಂ: 9449464125.

ರೈತರು ಸರ್ಕಾರ ನಿಗದಿಪಡಿಸಿದ ಗುಣಮಟ್ಟದ ಭತ್ತ, ಬಿಳಿಜೋಳ ನೀಡುವಂತೆ ಹಾಗೂ ತಮ್ಮ ಸಮೀಪದ ಖರೀದಿ ಕೇಂದ್ರಗಳಿಗೆ ಫ್ರೋಟ್ಸ್ ಐಡಿಯೊಂದಿಗೆ ಭೇಟಿ ನೀಡಿ ನಿಗದಿತ ದಿನಾಂಕದೊಳಗೆ ನೋಂದಣಿ ಮಾಡಿಸಿ ಕೊಳ್ಳುವಂತೆ ಕೊಪ್ಪಳ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರ ಗಳ ಇಲಾಖೆ ಉಪನಿರ್ದೇಶಕರು ತಿಳಿಸಿದ್ದಾರೆ.

# ಏ. 20ರಂದು ಅಶೋಕ ಶಿಲಾಶಾಸನ & ಕೊಪ್ಪಳ ಕೋಟೆ ಚಾರಣ ಸಾಹಸ

**ಹಂಪಿ ಟೈಮ್ಸ್ ಕೊಪ್ಪಳ**
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆವತಿಯಿಂದ ಅಶೋಕ ಶಿಲಾಶಾಸನ ಮತ್ತು ಕೊಪ್ಪಳ ಕೋಟೆ ಚಾರಣ ಸಾಹಸ ಕಾರ್ಯಕ್ರಮವನ್ನು ಏಪ್ರಿಲ್ 20 ರಂದು ಆಯೋಜಿಸಲಾಗಿದ್ದು, ಜಿಲ್ಲೆಯ ಆಸಕ್ತ ಯುವಕ/ಯುವತಿಯರು, ಯುವ ಉತ್ಸಾಹಿಗಳು ಹಾಗೂ ಎಲ್ಲಾ ವಯೋಮಾನದವರು ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಬೇಕು.

ಈ ಆಯೋಜನೆಗಾಗಿ ಕೆಲವು ನಿಭಂದನೆ ಗಳನ್ನು ಸೂಚಿಸಿದ್ದು, ಈ ಕಾರ್ಯಕ್ರಮದಲ್ಲಿ ಭಾಗವಹಿಸುವವರಿಗೆ ಪ್ರವೇಶ ಫೀ ರೂ.50 ಆಗಿರುತ್ತದೆ. ಚಾರಣ ಆಯೋಜನೆ ಸಮಯ ಬೆಳಿಗ್ಗೆ 6 ಗಂಟೆಯಿಂದ ಬೆಳಿಗ್ಗೆ 9 ಗಂಟೆಯವರೆಗೆ ಆಗಿದ್ದು, ಚಾರಣ ಪ್ರಾರಂಭದ ಸ್ಥಳ ಕೊಪ್ಪಳ ನಗರದ ಗದಗ ರಸ್ತೆಯ ಜಿಲ್ಲಾ ಕ್ರೀಡಾಂಗಣ ಆಗಿದೆ. ಎಲ್ಲಾ ವಯೋಮಿತಿಯವರು ಭಾಗವಹಿಸಲು ಅವಕಾಶವಿರುತ್ತದೆ. 10 ವರ್ಷ ಒಳಗಿನ ವಯೋಮಿತಿಯ ಮಕ್ಕಳು ಇದ್ದರೆ ಅವರೊಂದಿಗೆ ಪಾಲಕರು ಕಡ್ಡಾಯವಿರಬೇಕು. ಚಾರಣಕ್ಕೆ ಬರುವವರು ಕಡ್ಡಾಯವಾಗಿ ನೀರಿನ ಬಾಟಲ್, ಕರವಸ್ತ್ರ ಮತ್ತು ತಮಗೆ ಅಗತ್ಯವಿರುವ ವಸ್ತುಗಳನ್ನು ತಾವೇ ತರಬೇಕು. ಮಾರ್ಗದರ್ಶಕರ ಮಾರ್ಗದರ್ಶನದಂತೆ ನಡೆದುಕೊಳ್ಳಬೇಕು. ಮಕ್ಕಳನ್ನು ಪ್ರಾರಂಭದ ಸ್ಥಳಕ್ಕೆ ಮತ್ತು ಅಂತ್ಯದ ಸ್ಥಳದಿಂದ ಕರೆದುಕೊಂಡು ಹೋಗುವ ಜವಾಬ್ದಾರಿ ಪಾಲಕರದ್ದಾಗಿರುತ್ತದೆ. ಉಚಿತ ಪೋಟೊ ಮತ್ತು ವಿಡಿಯೋ (ಸಾಪ್ಟ್ ಕಾಫಿ) ನೀಡಲಾಗುವುದು. ಚಾರಣಕ್ಕೆ ಹೊಂದಿಕೊಳ್ಳುವಂತ ಶ್ಯೂ ಮತ್ತು ಡ್ರೆಸ್ ಧರಿಸಿರಬೇಕು. ಭಾಗವಹಿಸುವರಿಗೆ ಉಪಹಾರದ ವ್ಯವಸ್ಥೆ ಇರುತ್ತದೆ.

ಚಾರಣದ ಮಾರ್ಗ: ಜಿಲ್ಲಾ ಕ್ರೀಡಾಂಗಣ, ಶೀಲ್ಪಾಗ್ರಾಂಡ್ ಹೋಟಲ್ ಹಿಂದುಗಡೆಯಿಂದ ಅಶೋಕ ಶಿಲಾಶಾಸನ, ಗುಡ್ಡದ ದಾರಿಯ ಮಾರ್ಗವಾಗಿ ಮರ್ದಾನಲಿ ದರ್ಗಾ ವರೆಗೆ ಹಾಗೂ ವಿಶ್ರಾಂತಿ ಉಪಹಾರದ ಬಳಿಕ ಅದೇ ಮಾರ್ಗವಾಗಿ ವಾಪಸ.

ಹೆಚ್ಚಿನ ಮಾಹಿತಿಗಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕೊಪ್ಪಳ ಕಛೇರಿಯ ಸಿಬ್ಬಂದಿ ತುಕಾರಾಮ್, ಮೊ.ಸಂ: 8197398600, ವಿಶ್ವನಾಥ ಮೊ.ಸಂ: 8660455969 ಮತ್ತು ಕಛೇರಿ ದೂರವಾಣಿ ಸಂಖ್ಯೆ 08539-230121ಗೆ ಸಂಪರ್ಕಿಸಲು ಅಥವಾ ಕಛೇರಿಗೆ ಖುದ್ದಾಗಿ ಭೇಟಿ ನೀಡಿ, ಸಂಪರ್ಕಿಸುವಂತೆ ಕೊಪ್ಪಳ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

